# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಬುಧವಾರ, ಸೆಪ್ಟೆಂಬರ್ 29, 2021

ಸಂಪುಟ : 48 ಸಂಚಿಕೆ : 139 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 4.00 www.janathavani.com janathavani@mac.com


## ಮಕ್ಕಳ ಜ್ವರ: ಸಮರ್ಪಕ ವರದಿ ಸಲ್ಲಿಸಲು ಸೂಚನೆ



ದಾವಣಗೆರೆ, ಸೆ. 28- ಜಿಲ್ಲೆಯಲ್ಲಿ ಖಾಸಗಿ ಆಸ್ಪತ್ರೆಗಳು ತಮ್ಮ ಆಸ್ಪತ್ರೆಗಳಿಗೆ ಬರುವ 18 ವರ್ಷದೊಳಗಿನ ಮಕ್ಕಳಲ್ಲಿನ ಜ್ವರದ ಪ್ರಕರಣಗಳ ಬಗ್ಗೆ ಸಮರ್ಪಕವಾಗಿ ವರದಿ ಸಲ್ಲಿಸಬೇಕು ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಸೂಚಿಸಿದ್ದಾರೆ.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಏರ್ಪಡಿಸಲಾದ ಜಿಲ್ಲಾ ಮಟ್ಟದ ಕೋವಿಡ್-19 ತಾಂತ್ರಿಕ ತಜ್ಞರ ಸಲಹಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

3ನೇ ಅಲೆಯಲ್ಲಿ 18 ವರ್ಷದೊಳಗಿನ ಮಕ್ಕಳಿಗೆ ಕೋವಿಡ್ ಸೋಂಕು ಹೆಚ್ಚಾಗಿ ತಗಲುವ ಸಂಭವವಿರುವುದರಿಂದ ಜ್ವರದ ಪ್ರಕರಣಗಳ ವರದಿಯು ಗಂಭೀರವಾಗಿರುತ್ತದೆ. ಹೀಗಾಗಿ ಖಾಸಗಿ ಮತ್ತು ಸರ್ಕಾರಿ ಆಸ್ಪತ್ರೆಗಳಿಗೆ ವೈದ್ಯರ ತಂಡದೊಂದಿಗೆ ನಿಯಮಿತವಾಗಿ ಭೇಟಿ ನೀಡಿ, ಈ ಕುರಿತು ಪರಿಶೀಲನೆ ಮಾಡಿ ವರದಿ ಸಲ್ಲಿಸಬೇಕು. ಅಲ್ಲದೆ ಮುಂದಿನ ಸಭೆಗೆ ಮಕ್ಕಳ ತಜ್ಞರ ಸಂಘದ ಅಧ್ಯಕ್ಷರನ್ನು ಆಹ್ವಾನಿಸಬೇಕು ಎಂದು ಜಿಲ್ಲಾ ಕೀಟಜನ್ಯ ರೋಗ ನಿಯಂತ್ರಣಾಧಿಕಾರಿ ಡಾ|| ನಟರಾಜ್ ಅವರಿಗೆ ಸೂಚಿಸಿದರು.

ಜಿಲ್ಲಾ ಶಸ್ತ್ರಚಿಕಿತ್ಸಕ ಡಾ|| ಜಯಪ್ರಕಾಶ್ ಪ್ರತಿಕ್ರಿಯಿಸಿ, ವೆಂಟಿಲೇಟರ್‌ಗಳನ್ನು ರಿಪೇರಿ ಮಾಡಲು ಎ.ಎಂ.ಸಿ. ಒಪ್ಪಂದ ಮಾಡಿಕೊಳ್ಳಬೇಕಿದೆ ಎಂದರು. ಇದಕ್ಕೆ ಸ್ಪಂದಿಸಿದ ಜಿಲ್ಲಾಧಿಕಾರಿಗಳು ಎ.ಆರ್.ಎಸ್. ನಿಧಿಯಿಂದ ಎ.ಎಂ.ಸಿ. ಒಪ್ಪಂದ ಮಾಡಿಸಲು ಸೂಚಿಸಿದರು. ಡಿ.ಪಿ.ಹೆಚ್.ಎಲ್. ಪ್ರಯೋಗ ಶಾಲೆಯಲ್ಲಿರುವ ಎಲಿಸಾ ಉಪಕರಣಕ್ಕೆ ಕೂಡಲೇ ಆಂಟಿಜೆನ್ ಪರೀಕ್ಷೆ ಮಾಡಲು ಅವಶ್ಯಕವಿರುವ ಸಾಫ್ಟ್‌ವೇರ್ ಅಳವಡಿಸಲು ಕ್ರಮ ಕೈಗೊಳ್ಳಬೇಕೆಂದು ಜಿಲ್ಲಾ (2ನೇ ಪುಟಕ್ಕೆ)

# ಉಪ ಸಮರಕ್ಕೆ ಆಯೋಗ ಅಸ್ತು

## 3 ಲೋಕಸಭೆ, 30 ವಿಧಾನಸಭಾ ಕ್ಷೇತ್ರಗಳಿಗೆ ಅ.30ರಂದು ಚುನಾವಣೆ

ನವದೆಹಲಿ, ಸೆ. 28 – ಹದಿನಾಲ್ಕು ರಾಜ್ಯಗಳ ಮೂರು ಲೋಕಸಭಾ ಕ್ಷೇತ್ರಗಳು ಹಾಗೂ 30 ವಿಧಾನಸಭಾ ಕ್ಷೇತ್ರಗಳಿಗೆ ಅಕ್ಟೋಬರ್ 30ರಂದು ಚುನಾವಣೆ ನಡೆಯಲಿದೆ ಎಂದು ಚುನಾವಣಾ ಆಯೋಗ ಪ್ರಕಟಿಸಿದೆ. ಈ ಕ್ಷೇತ್ರಗಳ ಚುನಾವಣೆಯ ಮತ ಎಣಿಕೆ ನವೆಂಬರ್ 2ರಂದು ನಡೆಯಲಿದೆ.

ದಾದ್ರಾ ಮತ್ತು ನಗರ್, ಹಿಮಾಚಲ ಪ್ರದೇಶದ ಮಂಡಿ ಹಾಗೂ ಮಧ್ಯ ಪ್ರದೇಶದ ಖಾಂಡ್ವಾ ಲೋಕಸಭಾ ಕ್ಷೇತ್ರಗಳಿಗೆ ಚುನಾವಣೆ ನಡೆಯಲಿದೆ. ಈ ಮೂರೂ ಕ್ಷೇತ್ರಗಳ ಸಂಸದರು ನಿಧನರಾಗಿದ್ದರಿಂದ ಉಪ ಚುನಾವಣೆ ನಡೆಯಲಿದೆ. ಈ ಪೈಕಿ ಎರಡು ಕ್ಷೇತ್ರಗಳು ಬಿಜೆಪಿ ಹಾಗೂ ಒಂದು ಕ್ಷೇತ್ರ ಸ್ವತಂತ್ರ ಅಭ್ಯರ್ಥಿ ವಶದಲ್ಲಿತ್ತು.

14 ರಾಜ್ಯಗಳ 30 ವಿಧಾನಸಭಾ ಕ್ಷೇತ್ರಗಳಿಗೆ ಚುನಾವಣೆ ನಡೆಯಲಿದೆ. ಅಸ್ಸಾಂ (2ನೇ ಪುಟಕ್ಕೆ)

### ಸಿಂಧಗಿ, ಹಾನಗಲ್ ಚುನಾವಣೆ : ತ್ರಿಪಕ್ಷಗಳ ಪ್ರತಿಷ್ಠೆಯ ಕಣ

**ಅ.1 ರಂದು ಅಧಿಸೂಚನೆ , ಅಂದಿನಿಂದಲೇ ನಾಮಪತ್ರ ಸಲ್ಲಿಕೆ ಆರಂಭ. ನ. 2 ರಂದು ಮತ ಎಣಿಕೆ, ಅಂದೇ ಫಲಿತಾಂಶ**

ಬೆಂಗಳೂರು, ಸೆ, 28 - ರಾಜ್ಯದ ಹಾನಗಲ್, ಸಿಂಧಗಿ ವಿಧಾನಸಭಾ ಕ್ಷೇತ್ರಗಳಿಗೆ ಉಪಚುನಾವಣೆ ನಡೆಸಲು ಕೇಂದ್ರ ಚುನಾವಣಾ ಆಯೋಗ ಅಧಿಸೂಚನೆ ಹೊರಡಿಸಿದೆ. ಇದು ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ನಂತರ ನಡೆಯುತ್ತಿರುವ ಮೊದಲ ಉಪಚುನಾವಣೆಯಾಗಿದೆ.

ಉಪಚುನಾವಣೆಯನ್ನು ಆಡಳಿತ ರೂಢ ಬಿಜೆಪಿ, ಪ್ರತಿಪಕ್ಷ ಕಾಂಗ್ರೆಸ್ ಹಾಗೂ ಜೆಡಿಎಸ್‌ಗಳು ಪ್ರತಿಷ್ಠೆಯಾಗಿ ತೆಗೆದುಕೊಂಡಿದ್ದು, ಎರಡೂ ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ಕಣಕ್ಕಿಳಿಸುವುದಾಗಿ ಹೇಳಿಕೊಂಡಿವೆ.

ಸಿಂಧಗಿ ಮತ್ತು ಹಾನಗಲ್‌ಗೆ ಅಕ್ಟೋಬರ್ 30 ರಂದು ಮತದಾನ ನಡೆಯಲಿದ್ದು, ನವೆಂಬರ್ 2 ರಂದು ಮತ ಎಣಿಕೆ ನಡೆದು, ಅಂದೇ ಫಲಿತಾಂಶ ಪ್ರಕಟಗೊಳ್ಳಲಿದೆ.

ಎರಡೂ ಕ್ಷೇತ್ರಗಳ ಉಪಚುನಾವಣೆಗೆ ಅಕ್ಟೋಬರ್ 1 ರಂದು ಅಧಿಸೂಚನೆ ಹೊರಬೀಳ ಲಿದ್ದು, ಅಂದಿನಿಂದಲೇ ನಾಮಪತ್ರ ಸಲ್ಲಿಕೆ ಆರಂಭವಾಗಲಿದೆ.

ಅಕ್ಟೋಬರ್ 8 ರವರೆಗೂ ನಾಮಪತ್ರ ಸಲ್ಲಿಸಲು ಅವಕಾಶವಿದ್ದು, ನಾಮಪತ್ರಗಳ ಪರಿಶೀಲನೆ 11 ರಂದು, ಹಿಂದಕ್ಕೆ ಪಡೆಯಲು 13 ರಂದು ಕೊನೆಯ ದಿನವಾಗಿರುತ್ತದೆ. (2ನೇ ಪುಟಕ್ಕೆ)

## ಸರಳ ದಸರಾ ಉದ್ಘಾಟನೆಗೆ ಕೃಷ್ಣ

ಮೈಸೂರು, ಸೆ. 28 - ಬರುವ ಅಕ್ಟೋಬರ್ 7ರಿಂದ ನಡೆಯಲಿರುವ ಮೈಸೂರು ದಸರಾ ಮಹೋತ್ಸವವನ್ನು ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಉದ್ಘಾಟಿಸಲಿದ್ದಾರೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.



ಎಸ್.ಎಂ.ಕೃಷ್ಣ ಅಧಿಕಾರದಲ್ಲಿದ್ದಾಗ ಅಭಿವೃದ್ಧಿ ಕಾರ್ಯ ಮಾಡಿದ್ದರು. ಅವರು ಮುಖ್ಯಮಂತ್ರಿ, ಕೇಂದ್ರ ಸಚಿವರಾಗಿದ್ದಾಗ ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದಾರೆ. ಹಾಗಾಗಿ ಅವರನ್ನು ದಸರಾ ಉದ್ಘಾಟಕರಾಗಿ ಆಯ್ಕೆ ಮಾಡಲಾಗಿದೆ ಎಂದು ಬೊಮ್ಮಾಯಿ ತಿಳಿಸಿದ್ದಾರೆ.

ಮುಂದಿನ ತಿಂಗಳು ನಡೆಯಲಿರುವ ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವದ ಅಂಗವಾಗಿ ಪಾರಂಪರಿಕ ಕಾರ್ಯಕ್ರಮಗಳು ನಿಗದಿಯಾಗಿವೆ. ಆದರೆ, ಕೊರೊನಾ ಹಿನ್ನೆಲೆಯಲ್ಲಿ ಸರಳವಾಗಿ ದಸರಾ ನಡೆಯಲಿದ್ದು, ಅಕ್ಟೋಬರ್ 15ರಂದು ಜಂಬೂ ಸವಾರಿ ಅರಮನೆ ಆವರಣದಲ್ಲಿ ಮಾತ್ರ ನಡೆಯಲಿದೆ.

## ಆಟೋಗಳಿಗೆ ಮೀಟರ್ ಅಳವಡಿಕೆಗೆ ಅ.5ರ ಗಡುವು ನೀಡಿದ ಆರ್‌ಟಿಒ

ದಾವಣಗೆರೆ, ಸೆ.28 - ಜಿಲ್ಲೆಯಲ್ಲಿ ನಗರ ಮಿತಿಯೊಳಗಡೆ ಸಂಚರಿಸುವ ಆಟೋರಿಕ್ಷಾ ಮಾಲೀಕರು ಅಥವಾ ಚಾಲಕರು ಅ.5 ರೊಳಗಾಗಿ ಕಡ್ಡಾಯವಾಗಿ ಮೀಟರ್ ಅಳವಡಿಸಬೇಕು. ಹಳೆಯ ಮೀಟರ್ ಹೊಂದಿರುವವರು ಪರಿಷ್ಕೃತ ಆಟೋ ದರಪಟ್ಟಿಯನ್ನು ಸರಿಯಾಗಿ ಪ್ಯಾಸೆಂಜರ್‌ಗಳಿಗೆ ಕಾಣುವಂತೆ ಆಟೋ ಚಾಲಕರ ಸೀಟಿನ ಹಿಂಭಾಗ ಅಂಟಿಸಬೇಕು ಎಂದು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಸೂಚಿಸಿದ್ದಾರೆ.



ರಿಕ್ಯಾಬರೇಷನ್ ಮಾಡಿಸಲು ಹಾಗೂ ದರಪಟ್ಟಿಯನ್ನು ಪರಿಷ್ಕರಿಸುವ ಬಗ್ಗೆ ಎಲ್ಲಾ ಆಟೋ ಮಾಲೀಕರು ಮತ್ತು ಚಾಲಕರು ಇನ್ನೂ ಸ್ವಲ್ಪ ಕಾಲಾವಕಾಶ ಕೋರಿದ್ದರಿಂದ ಕಾಲಮಿತಿಯನ್ನು ಅ. 5 ರವರೆಗೆ ಮರು ನಿಗದಿಪಡಿಸಲಾಗಿದೆ ಎಂದು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ತಿಳಿಸಿದ್ದಾರೆ.






## ಪಂಜಾಬ್ ಕಾಂಗ್ರೆಸ್ ಅಧ್ಯಕ್ಷ ಸಿಧು ರಾಜೀನಾಮೆ

ಚಂಡೀಘಡ, ಸೆ. 28 -ಪಂಜಾಬ್ ಕಾಂಗ್ರೆಸ್ ಅಧ್ಯಕ್ಷ ನವಜೋತ್ ಸಿಂಗ್ ಸಿಧು ತಮ್ಮ ಹುದ್ದೆಗೆ ರಾಜೀನಾಮೆ ನೀಡಿದ್ದಾರೆ.



ವಿಧಾನಸಭಾ ಚುನಾವಣೆಗಳಿಗೆ ಕೆಲವೇ ತಿಂಗಳಿರುವಾಗ ಪಕ್ಷ ಆಘಾತಕ್ಕೆ ಗುರಿಯಾಗಿದೆ.ನೂತನ ಸಂಪುಟ ರಚನೆಯಾಗಿ ಖಾತೆಗಳ ಹಂಚಿಕೆಯಾದ (2ನೇ ಪುಟಕ್ಕೆ)

## ಮಾಜಿ ಕುಲಪತಿಗೆ ಸೇರಿದ 19 ಕೋಟಿ ರೂ. ಆಸ್ತಿ ಜಪ್ತಿ

ನವದೆಹಲಿ, ಸೆ. 28 – ಬೆಂಗಳೂರಿನ ವಿಶ್ವವಿದ್ಯಾನಿಲಯವೊಂದರ ಮಾಜಿ ಕುಲಪತಿಯೊಬ್ಬರಿಂದ 19 ಕೋಟಿ ರೂ.ಗಳ ಅಕ್ರಮ ಆಸ್ತಿ ವಶಪಡಿಸಿಕೊಂಡಿರುವುದಾಗಿ ಜಾರಿ ನಿರ್ದೇಶನಾಲಯ ತಿಳಿಸಿದೆ. ಸಾವಿರಾರು ವಿದ್ಯಾರ್ಥಿಗಳ ಪೋಷಕರಿಗೆ ವಂಚಿಸಿದ (2ನೇ ಪುಟಕ್ಕೆ)


### ಕೈಲಾಸ ಸಮಾರಾಧನೆ ಆಹ್ವಾನ ಪತ್ರಿಕೆ

|| ಶ್ರೀ ಉಚ್ಚೆಂಗೆಮ್ಮದೇವಿ ಪ್ರಸನ್ನ ||

ದಾವಣಗೆರೆ ಸಿಟಿ ಹೊಂಡದ ಸರ್ಕಲ್ ವಾಸಿ
**ಶ್ರೀ ಬಿ. ವೀರಣ್ಣ**
ಜಿಲ್ಲಾ ನಾಯಕ ಸಮಾಜದ ಅಧ್ಯಕ್ಷರು,
ನಗರಸಭೆ ಮಾಜಿ ಅಧ್ಯಕ್ಷರು ಮತ್ತು
**ಸಹೋದರರು** ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 17.09.2021ನೇ ಶುಕ್ರವಾರ
ರಾತ್ರಿ 9 ಗಂಟೆಗೆ ನಮ್ಮ ಪೂಜ್ಯ ತಾಯಿಯವರಾದ

**ಶ್ರೀಮತಿ ಹನುಮವ್ವ**

ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**'ಕೈಲಾಸ ಸಮಾರಾಧನೆ'ಯನ್ನು**
ದಿನಾಂಕ 29.9.2021ನೇ ಬುಧವಾರ
ಮಧ್ಯಾಹ್ನ 12 ಗಂಟೆಗೆ



ದಿ|| ಶ್ರೀಮತಿ ಹನುಮವ್ವನವರು

**ದಾವಣಗೆರೆ ಹೊಂಡದ ಸರ್ಕಲ್ ಬಳಿಯ ಮೃತರ ಸ್ವಗೃಹದಲ್ಲಿ** ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುತ್ತಾರೆ. ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ವಿನಂತಿ.


ಇಂತಿ ದುಃಖತಪ್ತರು,

- ಶ್ರೀಮತಿ ಲಕ್ಷ್ಮಿದೇವಿ, ಮಹಾನಗರ ಪಾಲಿಕೆ ಮಾಜಿ ಸದಸ್ಯರು ಮತ್ತು ಶ್ರೀ ಬಿ. ವೀರಣ್ಣ, ನಗರಸಭೆ ಮಾಜಿ ಅಧ್ಯಕ್ಷರು, ಜಿಲ್ಲಾ ನಾಯಕ ಸಮಾಜದ ಅಧ್ಯಕ್ಷರು ಹಾಗೂ ಮಕ್ಕಳು
- ಶ್ರೀಮತಿ ನಾಗಮ್ಮ ಮತ್ತು ಶ್ರೀ ಸಣ್ಣಸಿದ್ದಪ್ಪ ಮತ್ತು ಮಕ್ಕಳು
- ಶ್ರೀಮತಿ ಶಾರದಮ್ಮ ಮತ್ತು ಶ್ರೀ ರಂಗಪ್ಪ ಮತ್ತು ಮಕ್ಕಳು
- ಶ್ರೀಮತಿ ವಿಶಾಲ, ದಿ|| ಸುರೇಶ್ ಮತ್ತು ಮಕ್ಕಳು

ಹಾಗೂ ಕುಟುಂಬ ವರ್ಗದವರು ಮತ್ತು ಬಂಧು-ಮಿತ್ರರು.

ವಿ.ಸೂ : ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.






ಮಧ್ಯ ಕರ್ನಾಟಕದ ಅತ್ಯಾಧುನಿಕ ಹೃದಯ ರೋಗ ಆಸ್ಪತ್ರೆ

ಸಂಪೂರ್ಣ ಹೃದಯ ರೋಗ ಆರೈಕೆ (ವಯಸ್ಕರು ಮತ್ತು ಮಕ್ಕಳು)

ಅತ್ಯಾಧುನಿಕ ಕ್ಯಾಥ್ ಲ್ಯಾಬ್

ಅನುಭವಿ ತಜ್ಞ ವೈದ್ಯರುಗಳು

82,000+ ಆರೋಗ್ಯವಂತ ಹೃದಯಗಳು

ಎಸ್‌ಎಸ್ ನಾರಾಯಣ ಹಾರ್ಟ್ ಸೆಂಟರ್, ಎನ್‌ಹೆಚ್–4 ಬೈಪಾಸ್ ರೋಡ್, ದಾವಣಗೆರೆ

ಹೆಚ್ಚು ತಿಳಿಯಲು ಸ್ಕ್ಯಾನ್ ಮಾಡಿ

ವಿಶ್ವ ಹೃದಯ ದಿನ 29 ಸೆಪ್ಟೆಂಬರ್

(Toll Free) 180-0309-0309



### ಕೈಲಾಸ ಸಮಾರಾಧನೆ ಆಹ್ವಾನ



ಜನನ : 08-05-1934 ಮರಣ : 21-09-2021

|| ಶ್ರೀ ಕಾರಡಗಿ ವೀರಭದ್ರೇಶ್ವರ ಪ್ರಸನ್ನ ||

ದಾವಣಗೆರೆ ಸಿಟಿ, ವಿದ್ಯಾನಗರ ವಾಸಿ
**ಶ್ರೀ ಎಂ.ಎಸ್. ಅಗಡಿ** ಮತ್ತು
**ಶ್ರೀ ಜೆ.ಎಸ್. ಅಗಡಿ**
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 21.09.2021ನೇ ಮಂಗಳವಾರ
ಮಧ್ಯಾಹ್ನ 3.30ಕ್ಕೆ ನಮ್ಮ ಪೂಜ್ಯ ತಂದೆಯವರಾದ

**ಶ್ರೀ ಎಸ್.ಆರ್. ಅಗಡಿ**

ನಿವೃತ್ತ ಮುಖ್ಯೋಪಾಧ್ಯಾಯರು
ಅಕ್ಕಮಹಾದೇವಿ ಬಾಲಿಕಾ ಪ್ರೌಢಶಾಲೆ, ದಾವಣಗೆರೆ.
ಇವರು ದೈವಾಧೀನರಾದ ಪ್ರಯುಕ್ತ
ಮೃತರ ಆತ್ಮಶಾಂತಿಗಾಗಿ

'ಕೈಲಾಸ ಸಮಾರಾಧನೆ'ಯನ್ನು ದಿನಾಂಕ 29.09.2021ನೇ ಬುಧವಾರ ಬೆಳಿಗ್ಗೆ 11 ಗಂಟೆಗೆ **ದಾವಣಗೆರೆ ಸಿಟಿ ವಿದ್ಯಾನಗರ, 1ನೇ ಮೇನ್, 13ನೇ ಕ್ರಾಸ್‌ನಲ್ಲಿರುವ (# 803/2), ಮೃತರ ಸ್ವಗೃಹದಲ್ಲಿ** ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುತ್ತಾರೆ. ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು, ಶ್ರೀ ಎಂ.ಎಸ್. ಅಗಡಿ ಮತ್ತು ಶ್ರೀ ಜೆ.ಎಸ್. ಅಗಡಿ ಮತ್ತು ಮಕ್ಕಳು, ಮೊಮ್ಮಕ್ಕಳು, ಸೊಸೆಯಂದಿರು ಹಾಗೂ ಬಂಧು-ಮಿತ್ರರು. ಮೊ. : 93410 10518, 97415 62727




**ಉಬ್ಬಿರುವ ರಕ್ತನಾಳಗಳ ಸಮಸ್ಯೆಗೆ ದಾವಣಗೆರೆಯಲ್ಲಿ ನೋವು ರಹಿತ ಹಾಗೂ ಶಾಶ್ವತ ಪರಿಹಾರ...**

AVIS HOSPITALS

**ಇಂದು ಸೆಪ್ಟೆಂಬರ್ 29 .2021 ರಂದು**

ಉಬ್ಬಿರುವ ರಕ್ತನಾಳಗಳಿಗೆ ಅತ್ಯುತ್ತಮ ಚಿಕಿತ್ಸೆ
100% ಸುರಕ್ಷಿತ ಹಾಗೂ ವೇಗದ ಚೇತರಿಕೆ



ಡಾ|| ವಿನಯ್ ನ್ಯಾಪತಿ
ವ್ಯಾಸ್ಕುಲರ್ & ಇಂಟರ್‌ವೆನ್ಷನಲ್ ರೇಡಿಯಾಲಜಿಸ್ಟ್

ಶ್ರೀ ರಾಮಕೃಷ್ಣ ನರ್ಸಿಂಗ್ ಹೋಂ & ಲ್ಯಾಪ್ರಾಲಜಿ ಸೆಂಟರ್
#757/35, 8ನೇ ಮೇನ್
ಪಿ.ಜೆ. ಬಡಾವಣೆ, ದಾವಣಗೆರೆ -2

ಸಂದರ್ಶನಕ್ಕಾಗಿ ಸಂಪರ್ಕಿಸಿ :
+91-8088837000
/avisvascularcentre
www.avisvascularcentre.com

/avisvascularcentre www.avisvascularcentre.com

# ಮಲೇಬೆನ್ನೂರಿನ ಕೃಷಿ ಪತ್ತಿನ ಸಹಕಾರ ಸಂಘಕ್ಕೆ 5 ಲಕ್ಷ ರೂ. ಅನುದಾನ



**ಶಾಸಕ ರಾಮಪ್ಪ ಭರವಸೆ**

ಮಲೇಬೆನ್ನೂರು, ಸೆ.28- ಪಟ್ಟಣದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಕಟ್ಟಡದ ಅಭಿವೃದ್ಧಿಗೆ ಶಾಸಕರ ನಿಧಿಯಿಂದ 5 ಲಕ್ಷ ರೂ. ಅನುದಾನ ನೀಡುವುದಾಗಿ ಶಾಸಕ ಎಸ್. ರಾಮಪ್ಪ ಭರವಸೆ ನೀಡಿದ್ದಾರೆ.

ಇತ್ತೀಚೆಗೆ ಅವರು ಸಂಘದ ಕಚೇರಿಗೆ ಭೇಟಿ ನೀಡಿ, ನೂತನ ಅಧ್ಯಕ್ಷ ಪಿ.ಆರ್. ಕುಮಾರ್ ಅವರನ್ನು ಅಭಿನಂದಿಸಿದ ಸಂದರ್ಭದಲ್ಲಿ ಆಡಳಿತ ಮಂಡಳಿಯವರು ಸಂಘದ ಕಟ್ಟಡ ಕಾಮಗಾರಿ ಪೂರ್ಣಗೊಳಿಸಲು ಮತ್ತು ಕಾಂಪೌಂಡ್ ನಿರ್ಮಾಣಕ್ಕೆ ಅನುದಾನ ಕೇಳಿದಾಗ ಶಾಸಕರು ಸ್ಪಂದಿಸಿ, ಮಾತನಾಡಿದರು.

ಸಂಘದ ಮೂಲಕ ರೈತರಿಗೆ ಅಗತ್ಯ ಸಾಲ ಸೌಲಭ್ಯ ಕಲ್ಪಿಸಿ ಎಂದು ಸೂಚಿಸಿದ ಶಾಸಕರು, ಸಹಕಾರ ಇಲಾಖೆಯಿಂದಲೂ ಅನುದಾನ ಕೊಡಿಸುವುದಾಗಿ ಹೇಳಿದರು.

ಸಂಘದ ಅಧ್ಯಕ್ಷ ಪಿ.ಆರ್. ಕುಮಾರ್, ಸಂಘದ ನಿರ್ದೇಶಕರೂ ಆದ ಎಪಿಎಂಸಿ ಅಧ್ಯಕ್ಷ ಜಿ. ಮಂಜುನಾಥ್ ಪಟೇಲ್, ಸಂಘದ ನಿರ್ದೇಶಕರಾದ ಕೆ.ಪಿ. ಗಂಗಾಧರ್, ಯುನೂಸ್, ಡಿಸಿಸಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಜಿಗಳಿ ಆನಂದಪ್ಪ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಬಿ. ಅಬೀದ್ ಅಲಿ, ಸಮಾಜ ಸೇವಕ ನಂದಿಗಾವಿ ಶ್ರೀನಿವಾಸ್, ಸಂಘದ ಸಿಇಒ ಸಿದ್ದಪ್ಪ, ಗ್ರಾ.ಪಂ. ಮಾಜಿ ಅಧ್ಯಕ್ಷ ಭೋವಿ ಕುಮಾರ್, ರುಸ್ತುಂ ಅಲಿ, ಪಿ.ಹೆಚ್. ಶಿವಕುಮಾರ್, ಕೊಕ್ಕನೂರು ಸೋಮಶೇಖರ್, ಮೂಗಿನಗೊಂದಿ ಬಸವರಾಜಪ್ಪ, ಗಜಾನನ ಮೆಹರ್ವಾಡೆ, ಯಲವಟ್ಟಿ ಕೊಟ್ರೇಶ್ ನಾಯ್ಕ, ಬುಕ್ ಸ್ಟಾಲ್ ಶಿವು, ಪೂಜಾರ್ ಹಾಲೇಶ್ ಸೇರಿದಂತೆ ಅನೇಕರು ಹಾಜರಿದ್ದರು.

# ಎಸ್.ಪಿ.ಬಾಲಸುಬ್ರಮಣ್ಯಂ ತುಳುಕದ ಕೊಡ

## 'ಸ್ವರ ಸಾಮ್ರಾಟ ಎಸ್.ಪಿ. ಬಾಲಸುಬ್ರಮಣ್ಯಂ' ಕೃತಿ ಬಿಡುಗಡೆಯಲ್ಲಿ ಆನಂದ ಋಗ್ವೇದಿ ಬಣ್ಣನೆ



ದಾವಣಗೆರೆ, ಸೆ.28- ಸ್ವರ ಸಾಮ್ರಾಟರಾಗಿದ್ದ ಹಿರಿಯ ಗಾಯಕ ಡಾ. ಎಸ್.ಪಿ. ಬಾಲಸುಬ್ರಹ್ಮಣ್ಯಂ ಅವರು ತುಂಬಿದ ಹಾಗೂ ತುಳುಕದ ಕೊಡ ಆಗಿದ್ದರು ಎಂದು ಲೇಖಕ ಡಾ. ಆನಂದ ಋಗ್ವೇದಿ ಬಣ್ಣಿಸಿದರು.

ನಗರದ ಕುವೆಂಪು ಕನ್ನಡ ಭವನದಲ್ಲಿ 'ಜಿಲ್ಲೆ ಸಮಾಚಾರ' ಬಳಗದ ವತಿಯಿಂದ ಮೊನ್ನೆ ಹಮ್ಮಿಕೊಂಡಿದ್ದ ಪತ್ರಕರ್ತ ವಿ. ಹನುಮಂತಪ್ಪ ರಚಿಸಿರುವ 'ಸ್ವರ ಸಾಮ್ರಾಟ ಎಸ್.ಪಿ. ಬಾಲಸುಬ್ರಮಣ್ಯಂ' ಕೃತಿ ಬಿಡುಗಡೆ ಹಾಗೂ ಎಸ್ಪಿಬಿ ನೆನಪಿನ ಒಂದು ವರ್ಷ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಮಿಮಿಕ್ರಿ ಕಲೆ ಬಲ್ಲವರಾಗಿದ್ದರೂ ಚಿತ್ರ ಗೀತೆಗಳ ಗಾಯನ ಸಂದರ್ಭದಲ್ಲಿ ಮಿಮಿಕ್ರಿ ಕಲಾವಿದರನ್ನು ಬಳಸಿಕೊಳ್ಳಿ. ನನಗೆ ಹಾಡುವ ಅವಕಾಶ ಕೊಡಿ ಎಂದು ವಿನಮ್ರವಾಗಿ ಹೇಳುತ್ತಿದ್ದ ಬಾಲಸುಬ್ರಹ್ಮಣ್ಯಂ ಅವರದ್ದು ಪೂರ್ಣ ಕುಂಭದ ವ್ಯಕ್ತಿತ್ವವಾಗಿತ್ತು ಎಂದು ತಿಳಿಸಿದರು.

14 ಭಾಷೆಯಲ್ಲಿ 40 ಸಾವಿರ ಹಾಡುಗಳನ್ನು ಹಾಡಿರುವ ಬಾಲಸುಬ್ರಮಣ್ಯಂ ಅವರು ಡಬ್ಬಿಂಗ್ ಕಲಾವಿದರಾಗಿದ್ದರು. 12 ಗಂಟೆಯಲ್ಲಿ 21 ಹಾಡುಗಳನ್ನು ಹಾಡಿ ಗಿನ್ನೆಸ್ ದಾಖಲೆ ಮಾಡಿದ್ದರು. ಕರ್ನಾಟಕ ಹಿಮೊಫಿಲಿಯಾ ಸಂಸ್ಥೆಯಡಿ ಕುಸುಮ ರೋಗಿಗಳಿಗಾಗಿ ಪ್ರತಿ ಬಾರಿ ಹಾಡುತ್ತಾ ಸಂಭಾವನೆಯನ್ನು ಟ್ರಸ್ಟ್‌ಗೆ ನೀಡುತ್ತಿದ್ದ ಅವರು, ತಮ್ಮ ನಡವಳಿಕೆ ಮೂಲಕ ಎತ್ತರದ ಸ್ಥಾನಕ್ಕೆ ತಲುಪಿದ್ದರು ಎಂದು ಬಾಲಸುಬ್ರಮಣ್ಯಂ ಅವರ ವ್ಯಕ್ತಿತ್ವವನ್ನು ನೆನೆದರು.

ಕೊರೊನಾ ಬಗ್ಗೆ ಜಾಗೃತಿ ಹಾಡು ಹಾಡಿದ ಬಾಲಸುಬ್ರಮಣ್ಯಂ ಅವರು ಅದೇ ಕಾಯಿಲೆಗೆ ಬಲಿಯಾದರು. ಅವರು ಭೌತಿಕವಾಗಿ ನಮ್ಮ ಜೊತೆಗೆ ಇಲ್ಲವಾದರೂ ಹಾಡುಗಳ ರೂಪದಲ್ಲಿ ಧ್ರುವ ನಕ್ಷತ್ರವಾಗಿ ಜೀವಂತವಾಗಿದ್ದಾರೆ. ಕೋದಂಡ ಪಾಣಿ ಎಂಬ ವ್ಯಕ್ತಿ ಬಾಲಸುಬ್ರಮಣ್ಯಂ ಅವರನ್ನು ಚಿತ್ರರಂಗಕ್ಕೆ ಪರಿಚಯಿಸದೇ ಇದ್ದಿದ್ದರೆ, ಅನರ್ಘ್ಯ ರತ್ನವೊಂದು ಕಳೆದು ಹೋಗಿರುತ್ತಿತ್ತು ಎಂದ ಅವರು, ಬಾಲಸುಬ್ರಮಣ್ಯಂ ಜೀವನದ ಬಗ್ಗೆ ಗೊತ್ತಿರದ ಸಂಗತಿಗಳ ಬಗ್ಗೆ ಬೆಳಕು ಚೆಲ್ಲುವ ಈ ಕೃತಿ ಅವಿರಕ್ತವಾದ ಸಂಶೋಧನಾ ಕೃತಿ ಎಂದು ಹೇಳಿದರು.

ಚಿತ್ರ ನಿರ್ದೇಶಕ ಚಿಂದೋಡಿ ಬಂಗಾರೇಶ್ ಪುಸ್ತಕ ಬಿಡುಗಡೆಗೊಳಿಸಿ ಮಾತನಾಡುತ್ತಾ, ಬಾಲಸುಬ್ರಹ್ಮಣ್ಯಂ ಅವರೊಂದಿಗಿನ ಒಡನಾಟದ ದಿನಗಳನ್ನು ಮೆಲುಕು ಹಾಕುತ್ತಾ, ತಾವು ನಿರ್ಮಿಸಿದ ಗಾನಯೋಗಿ ಪಂಚಾಕ್ಷರ ಗವಾಯಿ ಚಿತ್ರದ ಹಾಡನ್ನು ಹಾಡಲು 8 ತಿಂಗಳು ಸಮಯ ಪಡೆದ ನಂತರ ಬಾಲಸುಬ್ರಹ್ಮಣ್ಯಂ ಅವರು ಶಾಸ್ತ್ರೀಯ ಬದ್ಧವಾದ ಹಾಡನ್ನು ಹಾಡಲು ಆಗುವುದಿಲ್ಲ ಎಂದಿದ್ದರು. ಆದರೂ ಬಿಡದೆ ಹಾಡಿಸಿದೆವು. ಆ ಹಾಡು ಅವರಿಗೆ ರಾಷ್ಟ್ರೀಯ ಪ್ರಶಸ್ತಿ ತಂದು ಕೊಟ್ಟಿತು ಎಂದು ಸ್ಮರಿಸಿದರು.

ಮೇಯರ್ ಎಸ್.ಟಿ. ವೀರೇಶ್ ಮಾತನಾಡಿ,ಸೆಲೆಬ್ರಿಟಿಯಾದರೂಜನಸಾಮಾನ್ಯರೊಂದಿಗಿನ ಒಡನಾಟದ ಬಗ್ಗೆ ಬಾಲಸುಬ್ರಹ್ಮಣ್ಯಂ ಅವರು ಜೀವಂತ ನಿದರ್ಶನ ಎಂದರು.

ವಕೀಲ ರಾಮಚಂದ್ರ ಕಲಾಲ್ ಮಾತನಾಡಿ, ಬಾಲಸುಬ್ರಹ್ಮಣ್ಯಂ ಅವರು ಪ್ರಚಾರ ಬಯಸಲಿಲ್ಲ. ಇಂತಹ ಅಪ್ರತಿಮ ಕಲಾವಿದರ ಬಗ್ಗೆ ಪುಸ್ತಕ ಪ್ರಕಟವಾಗಿರುವುದು ಗಮನಾರ್ಹ ಎಂದರು.

ಕಾರ್ಯಕ್ರಮದಲ್ಲಿ ಎಂಬಿ ಪದವಿ ಪೂರ್ವ ವಿಜ್ಞಾನ ಕಾಲೇಜಿನ ನಿರ್ದೇಶಕ ಡಾ. ಜಿ.ಎನ್. ಎಚ್. ಕುಮಾರ್, ದಾವಣಗೆರೆ ವಿವಿ ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ, ಪತ್ರಕರ್ತ ವಿ. ಹನುಮಂತಪ್ಪ, ಎನ್.ಟಿ. ಯರ್ರಿಸ್ವಾಮಿ, ಈಶ್ವರ ಶರ್ಮ ಇದ್ದರು. ಪತ್ರಕರ್ತ ರವಿ ಆರುಂಡಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಾಲಿಗ್ರಾಮ ಗಣೇಶ್ ಶೆಣೈ ನಿರೂಪಿಸಿದರು.

## ರುಪ್ಸ ಕರ್ನಾಟಕ ಅತ್ಯುತ್ತಮ ಶಿಕ್ಷಕ ಪ್ರಶಸ್ತಿಗೆ ಪ್ರಭು ಕುಮಾರ್ ಆಯ್ಕೆ



ದಾವಣಗೆರೆ, ಸೆ.28- ರುಪ್ಸ ಕರ್ನಾಟಕ ಖಾಸಗಿ ಶಾಲೆಗಳ ಸಂಘಟನೆ ಈ ವರ್ಷದಿಂದ ಖಾಸಗಿ ಶಾಲೆಗಳ ಶಿಕ್ಷಕರಿಗಾಗಿ ರಾಜ್ಯಮಟ್ಟದ ಅತ್ಯುತ್ತಮ ಶಿಕ್ಷಕ ಪ್ರಶಸ್ತಿಯನ್ನು ನೀಡುತ್ತಿದ್ದು, ಈ ಬಾರಿ ಜಿಲ್ಲೆಯಿಂದ 'ರುಪ್ಸ ಕರ್ನಾಟಕ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ'ಗೆ ನಗರದ ಈಶ್ವರಮ್ಮ ಶಾಲೆಯ ಪ್ರಾಂಶುಪಾಲ ಕೆ.ಎಸ್.ಪ್ರಭುಕುಮಾರ್ ಅವರನ್ನು ಆಯ್ಕೆ ಮಾಡಲಾಗಿದೆ.

ನಾಳೆ ದಿನಾಂಕ 29ರ ಬುಧವಾರ ಬೆಂಗಳೂರಿನಲ್ಲಿ ನಡೆಯಲಿರುವ ರಾಜ್ಯಮಟ್ಟದ ಸಮಾರಂಭದಲ್ಲಿ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಮತ್ತು ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ಮತ್ತು ಶಿಕ್ಷಕರ ಕ್ಷೇತ್ರದ ವಿಧಾನ ಪರಿಷತ್ ಸದಸ್ಯರುಗಳು ಹಾಗೂ ಸಂಘಟನೆಯ ಅಧ್ಯಕ್ಷ ಲೋಕೇಶ್ ತಾಳಿಕಟ್ಟೆಯವರ ಸಮ್ಮುಖದಲ್ಲಿ ಪ್ರಶಸ್ತಿ ನೀಡಿ ಸನ್ಮಾನಿಸಲಾಗುವುದು ಎಂದು ಜಿಲ್ಲಾ ಖಾಸಗಿ ಶಾಲೆಗಳ ಆಡಳಿತ ಮಂಡಳಿಗಳ ಒಕ್ಕೂಟದ ಕಾರ್ಯದರ್ಶಿ ಸಿ. ರಾಮಮೂರ್ತಿ ತಿಳಿಸಿದ್ದಾರೆ.

## ಅಮೃತ ಜೀವನ, ಅಮೃತ ಧಾರೆ ಯೋಜನೆಗೆ ಅರ್ಜಿ ಆಹ್ವಾನ

ದಾವಣಗೆರೆ, ಸೆ.26- ಪಶುಪಾಲನಾ ಮತ್ತು ಪಶುವೈದ್ಯಕೀಯ ಇಲಾಖೆಯು ಮುಖ್ಯಮಂತ್ರಿಗಳ ಅಮೃತ ಜೀವನ ಯೋಜನೆಯಡಿ ಮಿಶ್ರತಳಿ ಹಸು ಘಟಕ ಹಾಗೂ ಅಮೃತ ಧಾರೆ ಯೋಜನೆಯಡಿ ಹೋರಿಕರುಗಳನ್ನು ನೀಡುವ ಗುರಿ ಹೊಂದಿದ್ದು, ಆಸಕ್ತ ಫಲಾನುಭವಿಗಳು ಅಕ್ಟೋಬರ್ 2ರೊಳಗೆ ಅರ್ಜಿ ಸಲ್ಲಿಸಬಹುದು.

ಮುಖ್ಯಮಂತ್ರಿಗಳ ಅಮೃತ ಜೀವನ ಯೋಜನೆಯಡಿ ಜಿಲ್ಲೆಗೆ ಸಾಮಾನ್ಯ ವರ್ಗ-77, ಪರಿಶಿಷ್ಟ ವರ್ಗ-15 ಹಾಗೂ ಪರಿಶಿಷ್ಟ ಪಂಗಡದ 7 ಫಲಾನುಭವಿಗಳಿಗೆ ಒಂದು ಮಿಶ್ರ ತಳಿ ಹಸು ಘಟಕ ಸ್ಥಾಪಿಸಲು ಸಹಾಯ ಧನ ನೀಡುವ ಗುರಿ ನೀಡಲಾಗಿದೆ.

ತಾಲ್ಲೂಕುವಾರು ಪಶು ಆಸ್ಪತ್ರೆ ಸಹಾಯಕ ನಿರ್ದೇಶಕರ ದೂರವಾಣಿ ಸಂಖ್ಯೆ : ಡಾ.ಇಫ್ತೀಕರ್ ಅಲಿ, ಚನ್ನಗಿರಿ -9902905357, ಡಾ.ಜಗದೀಶ್. ಪಿ.ವಿ, ದಾವಣಗೆರೆ : 9448005250, ಡಾ. ನಂದ ಎಸ್.ಎಲ್, ಹರಿಹರ-8073900950, ಡಾ.ಬಾಬು ರತ್ನ, ಹೊನ್ನಾಳಿ 9448170225, ಡಾ. ಚಂದ್ರಶೇಖರ್ ಹೊಸಮನಿ, ನ್ಯಾಮತಿ 9632916450, ಡಾ.ಲಿಂಗರಾಜ್. ಕೆ.ಬಿ, ಜಗಳೂರು 99016 41942 ಇವರನ್ನು ಸಂಪರ್ಕಿಸಬಹುದು.

## ಬಿದರಗಡ್ಡೆ : ಇಂದು ವಿದ್ಯುತ್ ವ್ಯತ್ಯಯ

ಹೊನ್ನಾಳಿ ತಾಲ್ಲೂಕಿನ ಬಿದರಗಡ್ಡೆ ಸ್ವೀಕರಣಾ ಕೇಂದ್ರದಲ್ಲಿ ಇಂದು ತುರ್ತು ಕಾಮಗಾರಿ ಇರುವುದರಿಂದ ಸದರಿ ಸ್ವೀಕರಣಾ ಕೇಂದ್ರದಿಂದ ಸರಬರಾಜಾಗುವ ಕಮ್ಮಾರಗಟ್ಟೆ, ಮಾಸಡಿ, ಹರಳಹಳ್ಳಿ, ಅರಬಗಟ್ಟೆ, ಬಸವನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಬರುವ ಹಳ್ಳಿಗಳಿಗೆ ಇಂದು ಬೆಳಿಗ್ಗೆ 11 ರಿಂದ ಸಂಜೆ 4 ರವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

## ಮಾಯಕೊಂಡ ಬ್ಲಾಕ್ ಕಿಸಾನ್ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಯಾಗಿ ಸಿ. ಹರೀಶ್

ದಾವಣಗೆರೆ, ಸೆ. 28- ಮಾಯಕೊಂಡ ಬ್ಲಾಕ್ ಕಿಸಾನ್ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಯಾಗಿ ಜಮ್ಮಾಪುರದ ಸಿ. ಹರೀಶ್ ಅವರನ್ನು ನೇಮಕ ಮಾಡಲಾಗಿದೆ ಎಂದು ಜಿಲ್ಲಾಧ್ಯಕ್ಷ ಬಸವರಾಜು ವಿ. ಶಿವಗಂಗಾ ತಿಳಿಸಿದ್ದಾರೆ.

## ಬೀದಿ ನಾಟಕಗಳ ಸ್ಕ್ರಿಪ್ಟ್ ರಚನೆಗೆ ಅರ್ಜಿ

ದಾವಣಗೆರೆ, ಸೆ.23- ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಪ್ರಸಕ್ತ ಸಾಲಿನ ವಿಶೇಷ ಘಟಕ, ಗಿರಿಜನ ಉಪ ಯೋಜನೆಯಡಿ ಜಿಲ್ಲಾ ಮಟ್ಟದಲ್ಲಿ ಅನುಸೂಚಿತ ಜಾತಿ ಮತ್ತು ಪಂಗಡದ ದೌರ್ಜನ್ಯ ಅಧಿನಿಯಮದಲ್ಲಿರುವ ಅಸ್ಪೃಶ್ಯತೆ ನಿವಾರಣೆ ವಿಷಯವನ್ನು ಬೀದಿ ನಾಟಕಗಳ ಮೂಲಕ ಸಾರ್ವಜನಿಕರಿಗೆ, ವಿದ್ಯಾರ್ಥಿಗಳಿಗೆ ಬೀದಿ ನಾಟಕಗಳ ಮೂಲಕ ತಿಳಿಸುವ ಉದ್ದೇಶದಿಂದ ಬೀದಿ ನಾಟಕದ ಸ್ಕ್ರಿಪ್ಟ್‌ಗಳನ್ನು ರಚಿಸಬೇಕಿದ್ದು, ಅರ್ಹ ಲೇಖಕರಿಂದ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತ ಅರ್ಹ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಲೇಖಕರು ಅರ್ಜಿ ಸಲ್ಲಿಸಬಹುದಾಗಿದ್ದು, ಅರ್ಜಿ ಸಲ್ಲಿಸಲು ಅಕ್ಟೋಬರ್ 5 ಕೊನೆಯ ದಿನವಾಗಿದೆ. ಹೆಚ್ಚಿನ ಮಾಹಿತಿಗೆ ಫೋನ್: 08192-234849 ಸಂಪರ್ಕಿಸುವುದು.

## ಟಾಂಗಾದಲ್ಲಿ ಜಿಲ್ಲಾಧಿಕಾರಿ ಕಛೇರಿಗೆ ತೆರಳುವ ಸಿದ್ದರಾಮಯ್ಯ, ಎಸ್ಸೆಸ್, ಎಸ್ಸೆಸ್ಸೆಂ, ಮಂಜಪ್ಪ



ಅಗತ್ಯ ವಸ್ತುಗಳ ಬೆಲೆ ಏರಿಕೆಯನ್ನು ಖಂಡಿಸಿ, ಜಿಲ್ಲಾ ಕಾಂಗ್ರೆಸ್ ವತಿಯಿಂದ ದಾವಣಗೆರೆಯ ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗದಲ್ಲಿ ಇಂದು ಬೆಳಿಗ್ಗೆ ವಿನೂತನ ಪ್ರತಿಭಟನೆ ನಡೆಯಲಿದೆ ಎಂದು ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ತಿಳಿಸಿದ್ದಾರೆ.

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಹಿರಿಯ ಶಾಸಕ ಡಾ.ಶಾಮನೂರು ಶಿವಶಂಕರಪ್ಪ, ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ.ಮಂಜಪ್ಪ ಅವರುಗಳು ಸಂಗೊಳ್ಳಿ ರಾಯಣ್ಣ ಪ್ರತಿಮೆಗೆ ಮಾಲಾರ್ಪಣೆ ಮಾಡುವರು. ಅಲ್ಲಿಂದ ಪ್ರತಿಭಟನೆ ನಡೆಯಲಿರುವ ಜಿಲ್ಲಾಧಿಕಾರಿ ಕಛೇರಿಯವರೆಗೆ ಟಾಂಗಾದ ಮೂಲಕ ಭಾಗವಹಿಸುವರು.

ಈ ಹಿನ್ನೆಲೆಯಲ್ಲಿ ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಅವರು ಪ್ರತಿಭಟನೆಯಲಿರುವ ಸ್ಥಳಕ್ಕೆ ಮಂಗಳವಾರ ಸಂಜೆ ಭೇಟಿ ನೀಡಿ, ಸ್ಥಳ ಪರಿಶೀಲನೆ ನಡೆಸಿದರಲ್ಲದೇ, ಪ್ರತಿಭಟನೆಗೆ ಕೈಗೊಂಡಿರುವ ಸಿದ್ಧತೆ ಕುರಿತಂತೆ ಕಾರ್ಯಕರ್ತರೊಂದಿಗೆ ಚರ್ಚಿಸಿದರು.

## ಜ್ಞಾನ ಸಾಗರ ಪಿ.ಯು. ಕಾಲೇಜಿನಲ್ಲಿ ಸ್ನೇಹ ಬಂಧ



ದಾವಣಗೆರೆ, ಸೆ. 28 – ನಗರದ ಜ್ಞಾನ ಸಾಗರ ಪದವಿ ಪೂರ್ವ ಕಾಲೇಜಿನಲ್ಲಿ ಪ್ರಗ್ಯಾ ಐಐಟಿ - ಮೆಡಿಕಲ್ ಅಕಾಡೆಮಿ ಆಶ್ರಯದಲ್ಲಿ ಪ್ರಥಮ ಪಿಯು ವಿದ್ಯಾರ್ಥಿಗಳಿಗಾಗಿ ಸ್ನೇಹ ಬಂಧ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ದಾವಣಗೆರೆ ವಿ.ವಿ. ಕನ್ನಡ ಅಧ್ಯಯನ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ. ಹೆಚ್.ವಿ. ಶಾಂತರಾಜು ಕಾರ್ಯಕ್ರಮ ಉದ್ಘಾಟಿಸಿದರು. ನೆಮ್ಮದಿ ಫೌಂಡೇಷನ್ ಸ್ಥಾಪಕ ಹಾಗೂ ರಾಜ್ಯ ಪ್ರಶಸ್ತಿ ಪುರಸ್ಕೃತ ಡಾ. ಬಿ.ಹೆಚ್. ಲಕ್ಷ್ಮಣ ರೆಡ್ಡಿ ಮುಖ್ಯ ಅತಿಥಿಯಾಗಿದ್ದರು. ಕಾಲೇಜಿನ ಕಾರ್ಯದರ್ಶಿ ಬಸವರಾಜ್ ಸಾಗರ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಕಾಲೇಜಿನ ಪ್ರಾಂಶುಪಾಲ ಕೆ.ಪ್ರಸನ್ನ ಕುಮಾರ್, ಪ್ರಗ್ಯಾ ಐಐಟಿ - ಮೆಡಿಕಲ್ ಅಕಾಡೆಮಿ ಕಾರ್ಯದರ್ಶಿ ಜಿ.ಆರ್. ಸಂದೇಶ್ ಹಾಗೂ ನಿರ್ದೇಶಕರಾದ ಸುಜಯ್ ಬಿ.ಟಿ., ಹೆಚ್. ಅಂಜಿನಪ್ಪ, ಎಂ.ಆರ್. ರಮೇಶ್ ಮತ್ತಿತರರಿದ್ದರು.

## ಅಮೃತ್ ಮಹೋತ್ಸವ : ಚಿತ್ರಕಲೆ ರಚನೆಗೆ ಅವಕಾಶ


ದಾವಣಗೆರೆ ಸ್ಮಾರ್ಟ್ ಸಿಟಿ ಲಿಮಿಟೆಡ್ ವತಿಯಿಂದ ಆಜಾದಿ ಕಾ ಅಮೃತ್ ಮಹೋತ್ಸವ ಕಾರ್ಯಕ್ರಮದ ಅಂಗವಾಗಿ ಗುರುಭವನ ರಸ್ತೆಯಲ್ಲಿ ಗೋಡೆಗಳ ಮೇಲೆ ದೇಶಭಕ್ತಿ ಸಾರುವಂತಹ ಚಿತ್ರಕಲೆಗಳನ್ನು ರಚಿಸುವವರಿಗೆ ಮುಕ್ತ ಅವಕಾಶ ಕಲ್ಪಿಸಲಾಗಿದೆ.

ವಿವಿಧ ಇಲಾಖೆಗಳ ಸಹಯೋಗದೊಂದಿಗೆ ಆಜಾದಿ ಕಾ ಅಮೃತ್ ಮಹೋತ್ಸವದ ನಿಮಿತ್ತ ಇಂದಿನಿಂದ ಮೂರು ದಿನಗಳ ಕಾಲ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಕಾರ್ಯಕ್ರಮದ ಅಂಗವಾಗಿ ಗುರುಭವನ ರಸ್ತೆಯಲ್ಲಿ ದೇಶ ಭಕ್ತಿ ಸಾರುವಂತಹ ಚಿತ್ರಕಲೆಗಳನ್ನು ಗೋಡೆಗಳ ಮೇಲೆ ರಚಿಸುವವರಿಗೆ ಮುಕ್ತ ಅವಕಾಶ ಕಲ್ಪಿಸಲಾಗಿದೆ.

## ಜಿಗಳಿಯಲ್ಲಿ ಇಂದು ಸಭೆ

ಜಿಗಳಿ ಗ್ರಾ.ಪಂ. ವತಿಯಿಂದ ಇಂದು ಬೆಳಿಗ್ಗೆ 10 ರಿಂದ ವಾರ್ಡ್ ಸಭೆಗಳನ್ನು ಏರ್ಪಡಿಸಿದ್ದು, ಮಧ್ಯಾಹ್ನ 3.30ಕ್ಕೆ ಗ್ರಾ.ಪಂ. ಅಧ್ಯಕ್ಷರಾದ ಶ್ರೀಮತಿ ಆಶಾ ಅಣ್ಣಪ್ಪ ಅವರ ಅಧ್ಯಕ್ಷತೆಯಲ್ಲಿ ಗ್ರಾ.ಪಂ. ಆವರಣದಲ್ಲಿ ಗ್ರಾಮಸಭೆಯನ್ನು ಕರೆಯಲಾಗಿದೆ ಎಂದು ಪಿಡಿಒ ಉಮೇಶ್ ತಿಳಿಸಿದ್ದಾರೆ. ಸಭೆಗೆ ಮಾರ್ಗದರ್ಶಿ ಅಧಿಕಾರಿಯಾಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಶ್ರೀಮತಿ ನಿರ್ಮಲ ಭಾಗವಹಿಸಲಿದ್ದಾರೆ.

## ಪಂಚಮಸಾಲಿ ಪೀಠದಲ್ಲಿ ಶ್ರೀ ಜಯಂತಿ



ಹರಿಹರದ ವೀರಶೈವ ಲಿಂಗಾಯತ ಪಂಚಮಸಾಲಿ ಜಗದ್ಗುರು ಪೀಠದಲ್ಲಿ ಶ್ರೀ ಪಂಚಮಸಾಲಿ ಜಗದ್ಗುರು ಲಿಂಗೈಕ್ಯ ಡಾ. ಮಹಾಂತ ಶಿವಾಚಾರ್ಯ ಮಹಾಸ್ವಾಮಿಗಳವರ 84ನೇ ಜಯಂತ್ಯೋತ್ಸವ ಪ್ರಯುಕ್ತ ಇಂದು ಬೆಳಿಗ್ಗೆ 5 ರಿಂದ ಲಿಂಗೈಕ್ಯ ಜಗದ್ಗುರುಗಳವರ ಕರ್ತೃ ಗದ್ದುಗೆಯಲ್ಲಿ ಮಹಾರುದ್ರಾಭಿಷೇಕ ಪೂಜಾ ವಿಧಿ ವಿಧಾನಗಳು, ಪಲ್ಲಕ್ಕಿ ಉತ್ಸವ, ಮಹಾಮಂಗಳಾರತಿ, ಮಹಾಪ್ರಸಾದ ನಡೆಯಲಿದೆ.


ಬೆಳಿಗ್ಗೆ 11ಕ್ಕೆ ಶ್ರೀ ಪಂಚಮಸಾಲಿ ಜಗದ್ಗುರು ಶ್ರೀ ವಚನಾನಂದ ಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ಧರ್ಮ ಸಭೆಯನ್ನು ಏರ್ಪಡಿಸಲಾಗಿದೆ.

## ಜೆಡಿಎಸ್ ಅಡಾಕ್ ಸಮಿತಿಗೆ ಮನ್ಸೂರ್



ದಾವಣಗೆರೆ, ಸೆ.28- ಜಿಲ್ಲಾ ಜಾತ್ಯತೀತ ಜನತಾದಳ ಪಕ್ಷದ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರಕ್ಕೆ ರಚಿಸಿರುವ ಅಡಾಕ್ ಸಮಿತಿ ಅಧ್ಯಕ್ಷರಾಗಿ ಯು.ಎಂ. ಮನ್ಸೂರ್ ಅಲಿ ನೇಮಕಗೊಂಡಿದ್ದಾರೆ.

## ಮಾಯಕೊಂಡ ಕಿಸಾನ್ ಕಾಂಗ್ರೆಸ್‌ಗೆ ಆಯ್ಕೆ



ದಾವಣಗೆರೆ, ಸೆ.28- ಮಾಯಕೊಂಡ ಬ್ಲಾಕ್ ಕಿಸಾನ್ ಕಾಂಗ್ರೆಸ್ ಉಪಾಧ್ಯಕ್ಷರಾಗಿ ಅಣಜಿ ಗ್ರಾಮದ ದಸ್ತಗೀರ್ ಸಾಬ್ ನೇಮಕಗೊಂಡಿದ್ದಾರೆ.

## ಮಗಳ ಗಂಡನ ಹತ್ಯೆ ಪ್ರಕರಣ: ತಾಯಿ, ಇಬ್ಬರು ಮಕ್ಕಳಿಗೆ ಶಿಕ್ಷೆ

ದಾವಣಗೆರೆ, ಸೆ.28- ಮಗಳನ್ನು ಪ್ರೀತಿಸಿ ಮನೆಯಿಂದ ಓಡಿ ಹೋಗಿ ಮದುವೆಯಾದ ದ್ವೇಷದ ಹಿನ್ನೆಲೆಯಲ್ಲಿ ತನ್ನಿಬ್ಬರು ಗಂಡು ಮಕ್ಕಳೊಂದಿಗೆ ಸೇರಿ ಮಗಳ ಗಂಡನನ್ನು ಹತ್ಯೆ ಮಾಡಿದ ತಾಯಿ ಮತ್ತು ಇಬ್ಬರು ಮಕ್ಕಳಿಗೆ ಇಲ್ಲಿನ 1ನೇ ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ ನ್ಯಾಯಾಲಯವು ಶಿಕ್ಷೆಯ ಜೊತೆಗೆ ದಂಡ ವಿಧಿಸಿ ತೀರ್ಪು ನೀಡಿದೆ.

ಹರಿಹರ ತಾಲ್ಲೂಕು ಕೊಂಡಜ್ಜಿ ಗ್ರಾಮದ ದುರುಗಮ್ಮ ಹಾಗೂ ಮಕ್ಕಳಾದ ತಿಮ್ಮೇಶ, ಭವಾನಿ ಶಿಕ್ಷೆಗೆ ಗುರಿಯಾದವರು.

ಕಳೆದ 2 ವರ್ಷಗಳ ಹಿಂದೆ ಅದೇ ಗ್ರಾಮದ ಹಾಲೇಶ ಎಂಬಾತ ದುರುಗಮ್ಮನ ಮಗಳಾದ ಭಾರತಿಯನ್ನು ಪ್ರೀತಿಸಿ ಮನೆಯಿಂದ ಓಡಿ ಹೋಗಿ ಮದುವೆ ಮಾಡಿಕೊಂಡಿದ್ದರು. ಆ ದ್ವೇಷದ ಹಿನ್ನೆಲೆಯಲ್ಲಿ ಜ. 23,2019ರಂದು ಹಾಲೇಶ ಮತ್ತು ಆತನ ತಾಯಿ ಆರೋಪಿತರ ಮನೆ ಮುಂದೆ ಹೋಗುತ್ತಿದ್ದಾಗ ಜಗಳ ತೆಗೆದು ಹಲ್ಲೆ ಮಾಡಿ, ತಿಮ್ಮೇಶನು ಚಾಕುವಿನಿಂದ ಹಾಲೇಶನಿಗೆ ತಿವಿದು ಕೊಲೆ ಮಾಡಿದ್ದ.

ಹರಿಹರ ಪೊಲೀಸ್ ಠಾಣೆಯ ವೃತ್ತ ನಿರೀಕ್ಷಕ ಗುರುನಾಥ ತನಿಖೆ ಮಾಡಿ ದೋಷಾರೋಪಣ ಪಟ್ಟಿ ಸಲ್ಲಿಸಿದ್ದರು. ಆರೋಪ ಸಾಬೀತಾಗಿದ್ದರಿಂದ ನ್ಯಾಯಾಲಯದ ನ್ಯಾಯಾಧೀಶರಾದ ಜೆ.ವಿ. ವಿಜಯಾನಂದ ಆರೋಪಿ ತಿಮ್ಮೇಶನಿಗೆ ಜೀವಾವಧಿ ಶಿಕ್ಷೆ ಹಾಗೂ 10 ಸಾವಿರ ದಂಡ, ದಂಡ ಪಾವತಿಸಲು ತಪ್ಪಿದಲ್ಲಿ 3 ತಿಂಗಳು ಸಜೆ ವಿಧಿಸಿದೆ. ಇತರೆ ಆರೋಪಿಗಳಾದ ದುರುಗಮ್ಮ ಹಾಗೂ ಭವಾನಿ ಇವರಿಗೆ 1 ತಿಂಗಳ ಸಜೆ ತಲಾ 250 ರೂ. ದಂಡ, ತಪ್ಪಿದಲ್ಲಿ 10 ದಿನ ಸಜೆ, 6 ತಿಂಗಳು ಸಜೆ, 500 ರೂ. ದಂಡ, ತಪ್ಪಿದಲ್ಲಿ 3 ತಿಂಗಳು ಸಜೆ, 1 ವರ್ಷ ಸಜೆ, 1 ಸಾವಿರ ದಂಡ, ತಪ್ಪಿದಲ್ಲಿ 2 ತಿಂಗಳು ಸಜೆ ವಿಧಿಸಿ ತೀರ್ಪು ನೀಡಿದ್ದಾರೆ. ಸರ್ಕಾರದ ಪರವಾಗಿ ಸರ್ಕಾರಿ ಅಭಿಯೋಜಕ ಕೆ. ಕೆಂಚಪ್ಪ ವಾದ ಮಂಡಿಸಿದ್ದರು.

## ಕ್ರಿಕೆಟ್ ಬೆಟ್ಟಿಂಗ್ : ಬಂಧನ

ದಾವಣಗೆರೆ, ಸೆ.28- ಕ್ರಿಕೆಟ್ ಬೆಟ್ಟಿಂಗ್ ಜೂಜಾಟದ ಮೇಲೆ ದಾಳಿ ನಡೆಸಿರುವ ಪೊಲೀಸರು, 58 ಸಾವಿರ ನಗದು, 2 ಮೊಬೈಲ್‌ಗಳನ್ನು ವಶಪಡಿಸಿ ಕೊಂಡಿದ್ದಾರೆ. ನಗರದ ರತ್ನಮ್ಮ ಹಾಸ್ಟೆಲ್ ಮತ್ತು ಡಯಟ್ ಕಾಲೇಜ್ ಮಧ್ಯ ಭಾಗದ ಸಾರ್ವಜನಿಕ ರಸ್ತೆಯಲ್ಲಿ ಕ್ರಿಕೆಟ್ ಬೆಟ್ಟಿಂಗ್ ಜೂಜಾಡುತ್ತಿದ್ದ ಓರ್ವನನ್ನು ಬಂಧಿಸಿದ್ದಾರೆ. ಕ್ರಿಕೆಟ್ ಬೆಟ್ಟಿಂಗ್ ದಂಧೆಯಲ್ಲಿ ತೊಡಗಿದ್ದ ಇತರರು ತಲೆಮರೆಸಿಕೊಂಡಿದ್ದಾರೆ. ಈ ಬಗ್ಗೆ ಬಡಾವಣೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## 1 ಪಾಸಿಟಿವ್, 6 ಗುಣ

ದಾವಣಗೆರೆ, ಸೆ.28- ಹೊರ ಜಿಲ್ಲೆಯಿಂದ ಬಂದ ಓರ್ವರಲ್ಲಿ ಸೋಂಕು ಕಾಣಿಸಿಕೊಂಡಿದ್ದು, ಜಿಲ್ಲೆಯಲ್ಲಿನ 6 ಜನರು ಗುಣ ಮುಖರಾಗಿದ್ದಾರೆ. ಸಕ್ರಿಯ ಪ್ರಕರಣಗಳ ಸಂಖ್ಯೆ 65 ಇರುವುದಾಗಿ ಜಿಲ್ಲಾಧಿಕಾರಿಗಳ ಪ್ರಕಟಣೆ ತಿಳಿಸಿದೆ.


## ದಾವಣಗೆರೆ ಜಿಲ್ಲಾ ಸಹಕಾರ ಒಕ್ಕೂಟ ನಿಯಮಿತ

## 2020-2021ನೇ ಸಾಲಿನ 18ನೇ ವಾರ್ಷಿಕ ಸಾಮಾನ್ಯ ಸಭೆಯ ತಿಳುವಳಿಕೆ ಪತ್ರ

ದಿನಾಂಕ : 03.10.2021ರ ಭಾನುವಾರ ಮಧ್ಯಾಹ್ನ 12.00 ಘಂಟೆಗೆ ಸರಿಯಾಗಿ ದಾವಣಗೆರೆ ಜಿಲ್ಲಾ ಸಹಕಾರ ಒಕ್ಕೂಟದ 2020-21ನೇ ಸಾಲಿನ 18ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ಒಕ್ಕೂಟದ ಅಧ್ಯಕ್ಷರಾದ **ಶ್ರೀ ಎನ್.ಎ. ಮುರುಗೇಶ್‌ರವರ** ಅಧ್ಯಕ್ಷತೆಯಲ್ಲಿ 'ಕಲಾಪ್ರಕಾಶ ವೃಂದ' ದಾವಣಗೆರೆ-ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ಸಮುದಾಯ ಭವನ, ಎಂ.ಸಿ.ಸಿ. "ಎ" ಬ್ಲಾಕ್, ರಾಮಕೃಷ್ಣ ಆಶ್ರಮದ ಎದುರು, ದಾವಣಗೆರೆ ಇಲ್ಲಿ ಕರೆಯಲಾಗಿದೆ. ಮಾನ್ಯ ಸದಸ್ಯ ಸಹಕಾರ ಸಂಘಗಳು ತಮ್ಮ ಸಂಘದ/ಬ್ಯಾಂಕಿನ ಆಡಳಿತ ಮಂಡಲಿ ಸದಸ್ಯರಲ್ಲಿ ಒಬ್ಬ ಪ್ರತಿನಿಧಿಯನ್ನು ಮಾತ್ರ ಆಯ್ಕೆ ಮಾಡಿ ಸಂಘದ ಠರಾವು ಪ್ರತಿಯಲ್ಲಿ ಪ್ರತಿನಿಧಿಯ ಸಹಿಯೊಂದಿಗೆ ಸಾಮಾನ್ಯ ಸಭೆಗೆ ಸಕಾಲಕ್ಕೆ ಹಾಜರಾಗಲು ಕೋರಿದೆ.

ಮಾನ್ಯ ಸದಸ್ಯ ಸಹಕಾರ ಸಂಘಗಳಿಗೆ ಈಗಾಗಲೇ ವಾರ್ಷಿಕ ವರದಿ ಪುಸ್ತಕಗಳನ್ನು ಅಂಚೆ ಮೂಲಕ ಕಳುಹಿಸಲಾಗಿದೆ. ನೋಟಿಸ್ ತಲುಪದೇ ಇರುವವರು ಇದನ್ನೇ ವಾರ್ಷಿಕ ಸಾಮಾನ್ಯ ಸಭೆಯ ನೋಟಿಸ್ ಎಂದು ಪರಿಗಣಿಸಿ, ಹಾಜರಾಗಲು ಕೋರಿದೆ.

**ವಿಶೇಷ ಸೂಚನೆ :**

1) ಒಕ್ಕೂಟದ ಸಾಮಾನ್ಯ ಸಭೆಯಲ್ಲಿ ಅಧಿಕೃತ ಸದಸ್ಯರಿಗೆ ಮಾತ್ರ ಪ್ರವೇಶ. ಸಭೆಗೆ ಬರುವಾಗ ಈ ಸಭೆಯ ತಿಳುವಳಿಕೆ ಪತ್ರಿಕೆಯನ್ನು ಕಡ್ಡಾಯವಾಗಿ ಜೊತೆಯಲ್ಲಿ ತರಬೇಕಾಗಿ ವಿನಂತಿ.


2) ಒಕ್ಕೂಟದ ಉಪವಿಧಿಗಳ ತಿದ್ದುಪಡಿ ರೀತ್ಯಾ ಆಜೀವ ಸದಸ್ಯತ್ವ ಚಂದಾ ಹಣದ ಪರಿಷ್ಕೃತ ವ್ಯತ್ಯಾಸದ ಚಂದಾ ಹಣವನ್ನು ಪಾವತಿಸಲು ಕೋರಿದೆ.

**ಸ್ಥಳ : ದಾವಣಗೆರೆ.**
**ದಿನಾಂಕ : 27.09.2021**

**ಆಡಳಿತ ಮಂಡಲಿ ಅಪ್ಪಣೆ ಮೇರೆಗೆ**
**ಸಹಿ/- (ಕೆ.ಹೆಚ್. ಸಂತೋಷ್‌ಕುಮಾರ್)**
**ಪ್ರಭಾರ ಮುಖ್ಯಕಾರ್ಯನಿರ್ವಹಣಾಧಿಕಾರಿ**
**ದಾವಣಗೆರೆ ಜಿಲ್ಲಾ ಸಹಕಾರ ಒಕ್ಕೂಟ ನಿ., ದಾವಣಗೆರೆ.**




# ಕಾಂಗ್ರೆಸ್ ಕುರಿತು ಸಿಎಂ ಹೇಳಿಕೆ ಖಂಡನೀಯ



ದಾವಣಗೆರೆ, ಸೆ.28- ಎಸ್.ಆರ್. ಬೊಮ್ಮಾಯಿ ಅವರಂತಹ ಸೆಕ್ಯುಲರ್ ವ್ಯಕ್ತಿಯ ಮಗನಾಗಿ ಬಸವರಾಜ ಬೊಮ್ಮಾಯಿ ಅವರು ಆರ್.ಎಸ್.ಎಸ್ ಕೈಗೊಂಬೆಯಾಗಿ ಕಾಂಗ್ರೆಸ್ ಗುಲಾಮಗಿರಿಯ ಪಕ್ಷ ಎಂದು ಆರೋಪ ಮಾಡುತ್ತಿರುವುದು ಸರಿಯಲ್ಲ ಎಂದು ಕೆಪಿಸಿಸಿ ರಾಜ್ಯ ವಕ್ತಾರ ಡಿ.ಬಸವರಾಜ್ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಬೊಮ್ಮಾಯಿ ಅವರು ಮುಖ್ಯಮಂತ್ರಿಯಾದಾಗಿನಿಂದ ಪಕ್ಷದ ವರಿಷ್ಠರು ಯಾವುದೇ ಯೋಜನೆಗಳನ್ನು ಜಾರಿಗೆ ತರಲು ಬಿಡುತ್ತಿಲ್ಲ. ಇದರಿಂದ ಅವರು ಹತಾಶರಾಗಿ ಹೇಳಿಕೆ ನೀಡುತ್ತಿದ್ದಾರೆ ಎಂದು ಟೀಕಿಸಿದರು.

ಗುಲಾಮಗಿರಿಯ ಪಕ್ಷ ಯಾರದ್ದು ಎಂದು ಬೊಮ್ಮಾಯಿ ಅವರು ಇತಿಹಾಸ ನೋಡಿ ತಿಳಿದುಕೊಳ್ಳಲಿ. ಕೆಲ ವರ್ಷಗಳ ಹಿಂದೆ ಕಾಂಗ್ರೆಸ್ ಪಕ್ಷದಿಂದಲೇ ವಿಧಾನಸಭಾ ಚುನಾವಣೆಗೆ ಸ್ಪರ್ಧಿಸಲು ಟಿಕೆಟ್‌ಗಾಗಿ ಅಂಗಲಾಚಿದ್ದನ್ನು ಬೊಮ್ಮಾಯಿ ನೆನಪಿಸಿಕೊಳ್ಳಲಿ ಎಂದು ಕುಟುಕಿದರು.

ಸಿದ್ಧರಾಮಯ್ಯನವರ ಬಗ್ಗೆಯೂ ಬೊಮ್ಮಾಯಿ ಟೀಕಿಸಿದ್ದಾರೆ. ಬಿಜೆಪಿ ವ್ಯಾಪಾರಿಗಳ ಪಕ್ಷವಾದರೆ ಕಾಂಗ್ರೆಸ್ ಬಡವರ ಪಕ್ಷವಾಗಿದೆ. ಸಿದ್ಧರಾಮಯ್ಯನವರನ್ನು ಬಿಜೆಪಿ ಎಷ್ಟೇ ಟೀಕಿಸಿದರೂ ಅನ್ನ ತಿನ್ನುವ ಜನರು ಕಾಂಗ್ರೆಸ್ ಹಾಗೂ ಸಿದ್ಧರಾಮಯ್ಯನವರನ್ನು ಮರೆಯುವುದಿಲ್ಲ ಎಂದರು.

ಮಹಾನಗರ ಪಾಲಿಕೆ ಸದಸ್ಯ ಗಡಿಗುಡಾಳ್ ಮಂಜುನಾಥ್, ಕಾಂಗ್ರೆಸ್ ಮುಖಂಡರಾದ ಡಿ.ಕೆ. ಶಿವಕುಮಾರ್ ಹಾಗೂ ಸಿದ್ಧರಾಮಯ್ಯನವರ ಕೆಲಸಗಳನ್ನು ನೋಡಿ ಬಿಜೆಪಿಯವರಿಗೆ ನಡುಕ ಹುಟ್ಟಿಸಿದೆ. ಇದರಿಂದಾಗಿ ಅವರು ಅಪಪ್ರಚಾರ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಮತ್ತೋರ್ವ ಸದಸ್ಯ ಚಮನ್ ಸಾಬ್, ದೇಶದೆಲ್ಲೆಡೆ ಸುಳ್ಳು ವಿಜೃಂಭಿಸುತ್ತಿದೆ. ಆದರೆ ಸತ್ಯಕ್ಕೆ ಸಾವಿಲ್ಲ ಎಂದು ಬಿಜೆಪಿ ಮುಖಂಡರಿಗೆ ಕುಟುಕಿದರು.

ಪತ್ರಿಕಾಗೋಷ್ಠಿಯಲ್ಲಿ ಕೆ.ಎಂ. ಮಂಜುನಾಥ್, ಮೊಹಮ್ಮದ್ ಜಿಕ್ರಿಯಾ, ಆರ್.ಬಿ.ಝುಡ್ ಭಾಷಾ, ರಹಮ್ಮತ್‌ವುಲ್ಲಾ, ಡಿ.ಶಿವಕುಮಾರ್ ಉಪಸ್ಥಿತರಿದ್ದರು.

## ಆಜಾದಿ ಕಾ ಅಮೃತ್ ಮಹೋತ್ಸವ

# ಇಂದಿನಿಂದ ಜಾಗೃತಿ ಕಾರ್ಯಕ್ರಮ



ಆಜಾದಿ ಕಾ ಅಮೃತ್ ಮಹೋತ್ಸವದ ಅಂಗವಾಗಿ ಇಂದು ಮಧ್ಯಾಹ್ನ 1 ರಿಂದ ಸಂಜೆ 6 ರವರೆಗೆ, ನಾಳೆ ಗುರುವಾರ ಹಾಗೂ ಅಕ್ಟೋಬರ್ 1 ರಂದು ಬೆಳಿಗ್ಗೆ 11 ರಿಂದ ಸಂಜೆ 6 ರವರೆಗೆ ವಿವಿಧ ಕಾರ್ಯಕ್ರಮಗಳು ಜರುಗಲಿವೆ.

ರಾಜ್ಯ ಪೊಲೀಸ್ ಇಲಾಖೆಯಿಂದ ಶ್ವಾನ ದಳ ಪ್ರದರ್ಶನ ಹಾಗೂ ಅಪರಾಧ ತಡೆ, ರಸ್ತೆ ಸುರಕ್ಷತೆಗಳ ಜಾಗೃತಿ ಕಾರ್ಯಕ್ರಮ, ಪಾಲಿಕೆಯಿಂದ ಕಸ ವಿಂಗಡಣೆ ಬಗ್ಗೆ ಜಾಗೃತಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ಆರೋಗ್ಯ ಜಾಗೃತಿ ಹಾಗೂ ಕೋವಿಡ್-19 ಲಸಿಕಾ ಶಿಬಿರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಪೌಷ್ಠಿಕ ಆಹಾರ ಸೇವನೆ ಕುರಿತು ಜಾಗೃತಿ, ಬೆಸ್ಕಾಂ ವತಿಯಿಂದ ವಿದ್ಯುತ್ ಅವಘಡಗಳ ತಡೆಗಟ್ಟುವಿಕೆ ಹಾಗೂ ಸುರಕ್ಷತಾ ಕಾರ್ಯವಿಧಾನಗಳ ಕುರಿತು ಜಾಗೃತಿ, ತೋಟಗಾರಿಕೆ ಇಲಾಖೆಯಿಂದ ಸಾವಯವ ಗೊಬ್ಬರ ತಯಾರಿಕೆ ಕುರಿತು ಮಾಹಿತಿ, ರಾಜ್ಯ ವಾಯು ಮಾಲಿನ್ಯ ನಿಯಂತ್ರಣ ಮಂಡಳಿಯ ವತಿಯಿಂದ ವಾಯು ಮಾಲಿನ್ಯ ದುಷ್ಪರಿಣಾಮಗಳ ಕುರಿತು ಜಾಗೃತಿ, ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರದಿಂದ ಆಹಾರ ಸಮತೋಲನ ಮತ್ತು ಗುಣಮಟ್ಟ ಕುರಿತು ಜಾಗೃತಿ, ದೃಶ್ಯ ಕಲಾ ಮಹಾವಿದ್ಯಾಲಯದಿಂದ ಪೇಂಟಿಂಗ್ಸ್ ಪ್ರದರ್ಶನ ಹಾಗೂ ಗೋಡೆ ಬರಹ ಶಿಬಿರ ಕುರಿತು ಕಾರ್ಯಕ್ರಮ, ಇಂದು ಅಗ್ನಿ ಶಾಮಕ ಠಾಣೆಯಿಂದ ಅಗ್ನಿ ಅವಘಡಗಳಿಂದ ಸುರಕ್ಷತಾ ಕ್ರಮದ ಕುರಿತು ಅರಿವು ಕಾರ್ಯಕ್ರಮವು ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ನಡೆಯಲಿದೆ.

ಕ್ರೀಡಾ ಕಾರ್ಯಕ್ರಮವನ್ನು ಇಂದು ಬೆಳಿಗ್ಗೆ 6 ರಿಂದ ಬೆ. 8 ಗಂಟೆವರೆಗೆ ಮ್ಯಾರಥಾನ್, ನಾಳೆ ದಿನಾಂಕ 30 ರಂದು ಬೆಳಿಗ್ಗೆ 7 ರಿಂದ ಬೆ.8 ರವರೆಗೆ ವಾಕಥಾನ್, ಅ.1 ರಂದು ಬೆಳಿಗ್ಗೆ 6 ರಿಂದ ಬೆ. 8 ರವರೆಗೆ ಸೈಕ್ಲೋಥಾನ್, ಸಂಜೆ 4 ರಿಂದ 6 ರವರೆಗೆ ಸಾಹಸ ಕ್ರೀಡಾ ಪ್ರದರ್ಶನವನ್ನು ಗುರುಭವನ ರಸ್ತೆಯಲ್ಲಿ ಆಯೋಜಿಸಲಾಗಿದೆ.

ನಾಳೆ ಗುರುವಾರ ಬೀದಿ ನಾಟಕ ಪ್ರದರ್ಶನವನ್ನು ಹೊಸ ಗಡಿಯಾರ ಕಂಬದ ಸರ್ಕಲ್ ಹತ್ತಿರ (ರಿಂಗ್ ರಸ್ತೆ) ಮತ್ತು ಅ. 1 ರಂದು ಹೊಂಡದ ಸರ್ಕಲ್ ಬಳಿ ಬೆಳಿಗ್ಗೆ 10 ರಿಂದ ಮಧ್ಯಾಹ್ನ 12 ರವರೆಗೆ ಪ್ರದರ್ಶಿಸಲಾಗುತ್ತದೆ. ಗುರುಭವನ ರಸ್ತೆಯಲ್ಲಿ ಕರೋಕೆ ಸಂಗೀತ ಕಾರ್ಯಕ್ರಮ ಸರ್ಕಾರಿ ಅಧಿಕಾರಿಗಳು ಮತ್ತು ಇತರೆಯವರಿಂದ ನಾಳೆ ಗುರುವಾರ ಸಂಜೆ 6 ರಿಂದ 7 ರವರೆಗೆ, ಜಾನಪದ ಕಾರ್ಯಕ್ರಮ ನಾಳೆ ಗುರುವಾರ ಸಂಜೆ 7 ರಿಂದ ಸಂಜೆ 8 ರವರೆಗೆ ಆಯೋಜಿಸಿದ್ದು, ಸುಗಮ ಸಂಗೀತ ಕಾರ್ಯ ಕ್ರಮ ಇಂದು ಸಂಜೆ 7 ರಿಂದ ಸಂಜೆ 8 ರವರೆಗೆ ಜಯದೇವ ವೃತ್ತದಲ್ಲಿ ಹಾಗೂ ನಾಳೆ ದಿನಾಂಕ 30 ರ ಗುರುವಾರ ಸಂಜೆ 6 ರಿಂದ ಸಂಜೆ 7 ರವರೆಗೆ ರಾಂ ಅಂಡ್ ಕೋ ವೃತ್ತ ಮತ್ತು ನೃತ್ಯ ರೂಪಕ ಕಾರ್ಯಕ್ರಮ ಅಕ್ಟೋಬರ್ 1 ರ ಶುಕ್ರವಾರ ಸಂಜೆ 6 ರಿಂದ 8 ರವರೆಗೆ ಗುರುಭವನ ರಸ್ತೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗಿದೆ.

ನಗರ ಅರಣ್ಯೀಕರಣ ಕಾರ್ಯಕ್ರಮವನ್ನು ನಾಳೆ ಗುರುವಾರ ಗುರುಭವನ ರಸ್ತೆಯಲ್ಲಿ ಬೆಳಿಗ್ಗೆ 8 ರಿಂದ 10 ರವರೆಗೆ ಸಸಿ ನೆಡುವ ಕಾರ್ಯಕ್ರಮ, ತಂತ್ರಜ್ಞಾನದ ಅರಿವು ಕುರಿತು ವಿದ್ಯಾರ್ಥಿಗಳಿಗೆ ಕಿರು ಪರಿಚಯವನ್ನು ಆರಕ್ಷಕ ಅಧೀಕ್ಷಕರ ಕಛೇರಿಯಲ್ಲಿ ಅನುಷ್ಠಾನಗೊಳಿಸಿರುವ ಸ್ಯಾಟ್‌ಲೈಟ್ ಕಮಾಂಡ್ ಕಂಟ್ರೋಲ್ ಸೆಂಟರ್‌ನಲ್ಲಿ ಅಳವಡಿಸಿರುವ ತಂತ್ರಜ್ಞಾನಗಳ ಕಾರ್ಯವೈಖರಿ ಪರಿಚಯ ಕಾರ್ಯಕ್ರಮವನ್ನು ಇಂದು ಇಂಜಿನಿಯರಿಂಗ್ ಕಾಲೇಜು ಆಯ್ದ ವಿದ್ಯಾರ್ಥಿಗಳಿಗೆ, ನಾಳೆ ಗುರುವಾರ ಪದವಿ ಪೂರ್ವ ಕಾಲೇಜುಗಳ ಆಯ್ದ ವಿದ್ಯಾರ್ಥಿಗಳಿಗೆ, ಅಕ್ಟೋಬರ್ 1 ರಂದು ಪ್ರೌಢ ಶಾಲೆಗಳ ಆಯ್ದ ವಿದ್ಯಾರ್ಥಿಗಳಿಗೆ ಆಯೋಜಿಸಲಾಗಿದೆ ಎಂದು ದಾವಣಗೆರೆ ಸ್ಮಾರ್ಟ್ ಸಿಟಿ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕರು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ತಿಳಿಸಿದ್ದಾರೆ.

# ಭೂ ಸ್ವಾಧೀನ ಕೈ ಬಿಡದಿದ್ದರೆ ದೂಡಾ ಕಚೇರಿಗೆ ಬೀಗ

**ಕುಂದುವಾಡ ರೈತರ ಎಚ್ಚರಿಕೆ**

ದಾವಣಗೆರೆ, ಸೆ.28- ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದಿಂದ ಕುಂದುವಾಡದ ಬಳಿ ಸುಮಾರು 150 ಎಕರೆ ಜಮೀನನ್ನು ಭೂ ಸ್ವಾಧೀನ ಮಾಡಿಕೊಳ್ಳುವುದಾಗಿ ಹೇಳಿ ಪ್ರಕಟಣೆ ಹೊರಡಿಸಿರುವುದು ಅಲ್ಲಿನ ರೈತರ ಮೇಲೆ ನಡೆಸುತ್ತಿರುವ ದೌರ್ಜನ್ಯ ಎಂದು ಕುಂದುವಾಡದ ರೈತರು ಪತ್ರಿಕಾಗೋಷ್ಠಿಯಲ್ಲಿಂದು ಆರೋಪಿಸಿದ್ದಾರೆ.

ದೂಡಾ ಹೊರಡಿಸಿರುವ ಪ್ರಕಟಣೆಯನ್ನು ವಾಪಾಸ್ ಪಡೆಯಬೇಕು. ರೈತರ ಒಪ್ಪಿಗೆ ಇದ್ದರೆ ಮಾತ್ರ ಜಮೀನು ಖರೀದಿಸಿ ಬಡಾವಣೆ ನಿರ್ಮಿಸುತ್ತೇವೆ ಎಂದು ವಾರದೊಳಗೆ ದೂಡಾ ಅಧ್ಯಕ್ಷರು, ಆಯುಕ್ತರು ಪ್ರಕಟಣೆ ಹೊರಡಿಸಬೇಕು. ಇಲ್ಲದಿದ್ದರೆ ದೂಡಾ ಕಚೇರಿಗೆ ಬೀಗ ಜಡಿದು ಆಮರಣಾಂತ ಸತ್ಯಾಗ್ರಹ ನಡೆಸಲಾಗುವುದು ಎಂದು ಎಚ್ಚರಿಸಿದ್ದಾರೆ.

ದೂಡಾದಿಂದ ಹಳೇ ಕುಂದುವಾಡದಲ್ಲಿ 53 ಎಕರೆಯಷ್ಟು ವಸತಿ ಯೋಜನೆ ಅಭಿವೃದ್ಧಿ ಪಡಿಸಲು ಮುಂದಾಗಿದೆ.

ಆದರೆ, ಅಕ್ಕಪಕ್ಕದ ಸುಮಾರು 150 ಎಕರೆ ಜಮೀನನ್ನೂ ಭೂ ಸ್ವಾಧೀನ ಮಾಡುವುದಾಗಿ ಪ್ರಕಟಣೆ ಹೊರಡಿಸಿರುವುದಕ್ಕೆ ವಿರೋಧವಿದೆ ಎಂದು ಜೆ.ಎನ್. ಮಾರುತಿ ಹೇಳಿದರು.

ಈಗಾಗಲೇ 22 ಸಾವಿರ ಅರ್ಜಿ ಬಂದಿವೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಮತ್ತೊಮ್ಮೆ ಅರ್ಜಿ ಕರೆದರೆ 30 ಸಾವಿರ ಬರಬಹುದು. ಆಗ ಇಡೀ ಕುಂದುವಾಡವನ್ನೇ ಸ್ವಾಧೀನ ಮಾಡಿಕೊಂಡು ಗ್ರಾಮಸ್ಥರನ್ನು ಬೇರೆ ರಾಜ್ಯಕ್ಕೆ ಕಳುಹಿಸುವ ಹುನ್ನಾರ ನಡೆಯಬಹುದು. ಈ ಸ್ಥಳದಲ್ಲಿ ಸಣ್ಣ, ಅತಿ ಸಣ್ಣ ರೈತರು ವ್ಯವಸಾಯ ಮಾಡಿಕೊಂಡಿದ್ದಾರೆ. ಇರುವ ಅಲ್ಪ ಸ್ವಲ್ಪ ಜಮೀನನ್ನೂ ವಶಪಡಿಸಿಕೊಂಡು ಬಡಾವಣೆ ನಿರ್ಮಿಸಿ ರೈತರನ್ನು ಒಕ್ಕಲೆಬ್ಬಿಸುವುದು ಸರಿಯಲ್ಲ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಮಿಟ್ಲಕಟ್ಟೆ ಚಂದ್ರಪ್ಪ, ಹೆಚ್.ಸಿ. ಗಣೇಶಪ್ಪ, ಹೆಚ್.ಎನ್. ಗುರುನಾಥ್, ಎನ್.ಶಿವಪ್ಪ, ಹೆಚ್.ಜಿ. ಮಂಜಪ್ಪ, ಜೆ.ಆರ್. ಮಹಾಂತೇಶ್ ಉಪಸ್ಥಿತರಿದ್ದರು.

# ಸದಾಶಿವ ವರದಿ ಚರ್ಚಿಸದೇ ಶಿಫಾರಸ್ಸು

## ಹರಪನಹಳ್ಳಿಯಲ್ಲಿ ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟ ಪ್ರತಿಭಟನೆ



ಹರಪನಹಳ್ಳಿ, ಸೆ.28- ನ್ಯಾ. ಎ.ಜೆ. ಸದಾಶಿವ ಆಯೋಗದ ವರದಿಯನ್ನು ಸಾರ್ವಜನಿಕವಾಗಿ ಚರ್ಚಿಸದೇ ಕೇಂದ್ರಕ್ಕೆ ಶಿಫಾರಸ್ಸು ಮಾಡಿರುವುದನ್ನು ವಿರೋಧಿಸಿ ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟದ ತಾಲ್ಲೂಕು ಘಟಕದ ವತಿಯಿಂದ ಪಟ್ಟಣದಲ್ಲಿ ಪ್ರತಿಭಟನೆ ನಡೆಸಿ ತಹಶೀಲ್ದಾರರಿಗೆ ಮನವಿ ಸಲ್ಲಿಸಲಾಯಿತು.

ಹಾವೇರಿಯ ಬಂಜಾರ ಪೀಠದ ಶ್ರೀ ಗುರು ಕುಮಾರಸ್ವಾಮಿ ಮಾತನಾಡಿ, ಸದಾಶಿವ ಆಯೋಗದ ವರದಿಯನ್ನು ಏಕಪಕ್ಷೀಯವಾಗಿ ಕೇಂದ್ರಕ್ಕೆ ಶಿಫಾರಸ್ಸು ಮಾಡಬಾರದು. ಪರಿಶಿಷ್ಟ ಜಾತಿಗಳ ಸಹೋದರ ಸಮುದಾಯಗಳ ಮಧ್ಯೆ ಪ್ರಚೋದನೆ, ದ್ವೇಷ ಮತ್ತು ಒಡಕು ಬಿತ್ತಲು ಹೊರಟಿರುವ ಕೇಂದ್ರದ ಸಾಮಾಜಿಕ ನ್ಯಾಯ ಮತ್ತು ಅರಣ್ಯ ಸಬಲೀಕರಣ ಸಚಿವರನ್ನು ಸಂಪುಟದಿಂದ ಕೈ ಬಿಡಬೇಕು ಎಂದು ಆಗ್ರಹಿಸಿದರು.

ಹೋರಾಟಗಳ ಹೆಸರಿನಲ್ಲಿ ಬಂಜಾರರ ಕುಲಗುರು ಸೇವಾಲಾಲ್ ಗುರೂಜಿ, ಭೋವಿ ಸಮಾಜದ ದಾರ್ಶನಿಕ ಸಿದ್ಧರಾಮೇಶ್ವರ ಶರಣರು ಸೇರಿದಂತೆ, ಯಾವುದೇ ಶರಣರನ್ನು ಅವಹೇಳನ ಮಾಡಬಾರದು. ಸಚಿವ ಪ್ರಭು ಚವ್ಹಾಣ್ ಅವರನ್ನು ಅವಹೇಳನ ಮಾಡಿದ ಕಿಡಿಗೇಡಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು. ಎಸ್ಸಿ ಮೀಸಲಾತಿ ಹೆಚ್ಚಳಕ್ಕಾಗಿ ನ್ಯಾ. ಎಚ್.ಎನ್. ನಾಗಮೋಹನ್ ದಾಸ್ ಅವರು ಸರ್ಕಾರಕ್ಕೆ ಸಲ್ಲಿಸಿರುವ ವರದಿಯನ್ನು ಅಂಗೀಕರಿಸಬೇಕು ಎಂದು ಒತ್ತಾಯಿಸಿದರು.

ಕೊರಚ ಸಮಾಜದ ತಾಲ್ಲೂಕು ಅಧ್ಯಕ್ಷ ಕೆ. ಅಶೋಕ್ ಮಾತನಾಡಿ ಭೋವಿ, ಬಂಜಾರ, ಚಲುವಾದಿ, ಕೊರಚ, ಕೊರಮ, ಅಲೆಮಾರಿ, ಬುಡುಗ, ಜಂಗಮ, ಕಿಳ್ಳಿಕ್ಯಾತರು, ಹಾಗೂ ಇತರೆ 99 ಸಮುದಾಯಗಳಿಗೆ ಕಂಟಕವಾಗಿರುವ ನ್ಯಾಯಮೂರ್ತಿ ಎ.ಜೆ. ಸದಾಶಿವ ಆಯೋಗದ ವರದಿಯನ್ನು ಸಾರ್ವಜನಿಕವಾಗಿ ಚರ್ಚಿಸಿ, ಬಿಡುಗಡೆ ಮಾಡದೆ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಬಾರದು. ಆಯೋಗದ ರಚನೆಯ ಉದ್ದೇಶಕ್ಕೆ ವಿರುದ್ಧವಾಗಿರುವ ಶಿಫಾರಸ್ಸುಗಳನ್ನು ಮಾಡಲಾಗಿದ್ದು, ಆಯೋಗವು ತನ್ನ ಸಂವಿಧಾನಿಕ ಅಧಿಕಾರವನ್ನು ಉಲ್ಲಂಘಿಸಿದ್ದು, ಅಸಂವಿಧಾನಿಕ ಅಂಶಗಳನ್ನು ಮತ್ತು ಅವಾಸ್ತವಿಕ ಅಂಕಿ, ಅಂಶಗಳು ಈ ವರದಿಯಲ್ಲಿ ಇವೆ ಎಂದು ಆರೋಪಿಸಿದರು.

ಬಂಜಾರ ಸಮುದಾಯದ ಮುಖಂಡರಾದ ಬಿ.ವೈ. ವೆಂಕಟೇಶನಾಯ್ಕ, ಎಲ್.ಎಸ್. ಮಂಜಾನಾಯ್ಕ, ನಿವೃತ್ತ ಶಿಕ್ಷಕ ರಾಮಮೂರ್ತಿ, ತಾ.ಪಂ. ಮಾಜಿ ಸದಸ್ಯ ಮಲ್ಲೇಶ್, ಸತೀಶ್ ನಾಯ್ಕ, ರಾಜು ನಾಯ್ಕ, ಎಂ.ವಿ. ಕೃಷ್ಣಕಾಂತ್, ಸಿ.ಸಿ.ರಾಮಚಂದ್ರ ನಾಯ್ಕ, ಕೊರಮ ಸಂಘದ ಅಧ್ಯಕ್ಷ ರಾಜಕುಮಾರ, ಲಿಂಬ್ಯಾನಾಯ್ಕ, ಹಾಲೇಶನಾಯ್ಕ, ಈಶ್ವರನಾಯ್ಕ, ಭಾನ್ಯನಾಯ್ಕ, ಅಮೀಸಾ ಭೋವಿ, ನೀಲಗುಂದ ತಿರುಪತಿ, ಶಶಿಕುಮಾರ್ ನಾಯ್ಕ, ವೀರ್ಯಾನಾಯ್ಕ, ಜಗ್ಯಾನಾಯ್ಕ, ಬಸವರಾಜ್, ಜಿ. ಶಾಂತನಾಯ್ಕ, ಶಿವಮೂರ್ತಿ, ದೇವೇಂದ್ರ, ನೀಲಾನಾಯ್ಕ, ಪ್ರಕಾಶ್ ನಾಯ್ಕ ಇನ್ನಿತರರು ಪಾಲ್ಗೊಂಡಿದ್ದರು.

# ಇಂದು ಲಸಿಕಾ ಮೇಳ : 25,100 ಡೋಸ್ ಲಸಿಕೆ



ದಾವಣಗೆರೆ ತಾಲ್ಲೂಕಿನಲ್ಲಿ ಎಲ್ಲ ಗ್ರಾಮ ಪಂಚಾಯತ್‌ಗಳು, ಚಿಗಟೇರಿ ಜಿಲ್ಲಾ ಆಸ್ಪತ್ರೆ, ಪ್ರಾಥಮಿಕ, ಸಮುದಾಯ ಆರೋಗ್ಯ ಸಂಸ್ಥೆ ಹಾಗೂ ನಗರ ಆರೋಗ್ಯ ಕೇಂದ್ರಗಳಲ್ಲಿ ಇಂದು 19,600 ಡೋಸ್ ಕೋವಿಶೀಲ್ಡ್ ಮತ್ತು 5,500 ಕೋವ್ಯಾಕ್ಸಿನ್ ಒಟ್ಟು 25,100 ಡೋಸ್ ಲಸಿಕೆ ನೀಡುವ ಗುರಿ ಹೊಂದಲಾಗಿದೆ ಎಂದು ತಾಲ್ಲೂಕು ಆರೋಗ್ಯಾಧಿಕಾರಿ ಡಾ. ಎಲ್.ಡಿ. ವೆಂಕಟೇಶ್ ತಿಳಿಸಿದ್ದಾರೆ.

ದಾವಣಗೆರೆ ತಾಲ್ಲೂಕಿನಲ್ಲಿ 43 ಗ್ರಾಮ ಪಂಚಾಯತ್‌ಗಳಿಗೆ 8600 ಡೋಸ್ ಕೋವಿಶೀಲ್ಡ್, ಮಹಾನಗರಪಾಲಿಕೆ ವ್ಯಾಪ್ತಿಯ 45 ವಾರ್ಡ್‌ಗಳಿಗೆ 9000 ಡೋಸ್ ಕೋವಿಶೀಲ್ಡ್ ಮತ್ತು 3900 ಡೋಸ್ ಕೋವ್ಯಾಕ್ಸಿನ್. ನಗರದ 9 ಆರೋಗ್ಯ ಉಪಕೇಂದ್ರಗಳಿಗೆ 1300 ಕೋವಿಶೀಲ್ಡ್ ಮತ್ತು 1600 ಕೋವ್ಯಾಕ್ಸಿನ್, ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ 400 ಕೋವಿಶೀಲ್ಡ್, ಚಿಗಟೇರಿ ಜಿಲ್ಲಾಸ್ಪತ್ರೆಗೆ 300 ಡೋಸ್ ಕೋವಿಶೀಲ್ಡ್ ಲಸಿಕೆ ಹಂಚಿಕೆ ಮಾಡಲಾಗಿದೆ.

# ಪಿಎಸ್‌ಐ (ಸಿವಿಲ್) ನೇಮಕಾತಿ ಅ. 3 ರಂದು ಲಿಖಿತ ಪರೀಕ್ಷೆ

ದಾವಣಗೆರೆ, ಸೆ.28- ಪೊಲೀಸ್ ಇಲಾಖೆಗೆ ಸಂಬಂಧಿಸಿದಂತೆ ಪಿಎಸ್‌ಐ (ಸಿವಿಲ್) ಹುದ್ದೆಗಳಿಗೆ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳಿಗೆ ಅಕ್ಟೋಬರ್ 3 ರ ಭಾನುವಾರ ಬೆಳಿಗ್ಗೆ 11 ರಿಂದ 12.30 ರವರೆಗೆ ಪತ್ರಿಕೆ-1 ಮತ್ತು ಮಧ್ಯಾಹ್ನ 3 ರಿಂದ 4.30 ರವರೆಗೆ ಪತ್ರಿಕೆ-2 ರ ಲಿಖಿತ ಪರೀಕ್ಷೆಯನ್ನು ನಗರದ 15 ಪರೀಕ್ಷಾ ಕೇಂದ್ರಗಳಲ್ಲಿ ನಡೆಸಲಾಗುತ್ತದೆ. ಹೆಚ್ಚಿನ ಮಾಹಿತಿಗೆ ಇಲಾಖಾ ವೆಬ್‌ಸೈಟ್ www.recruitment.ksp.gov.in.

# ವಿಧಾನಸಭಾ ಚುನಾವಣೆಗಾಗಿ ಅಭ್ಯರ್ಥಿಗಳಿಗೆ 'ಕುಮಾರ ಪಾಠ'

## 2023ರ ವಿಧಾನಸಭಾ ಚುನಾವಣೆಯ ಮಾರ್ಗಸೂಚಿ ಪ್ರಸ್ತುತಪಡಿಸಿದ ಹೆಚ್ಡಿಕೆ

ಬೆಂಗಳೂರು, ಸೆ. 28 - ಮುಂದಿನ ವಿಧಾನಸಭೆ ಚುನಾವಣೆ ಎದುರಿಸುವ ಬಗ್ಗೆ ಪಕ್ಷದ ಹಾಲಿ ಶಾಸಕರೂ, ಕಳೆದ ಚುನಾವಣೆಯಲ್ಲಿ ಪರಾಜಿತರಾಗಿದ್ದ ಅಭ್ಯರ್ಥಿಗಳು ಹಾಗೂ ಮುಂದಿನ ಚುನಾವಣೆಯ ಅಭ್ಯರ್ಥಿಗಳ ಜತೆ ಮಹತ್ವದ ಸಭೆ ನಡೆಸಿದ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ, 2023ರ ಚುನಾವಣೆಗಾಗಿ ಮಾರ್ಗಸೂಚಿ ಪ್ರಸ್ತುತಪಡಿಸಿದ್ದಾರೆ.

ಕಾಲೇಜು ಪ್ರಾಧ್ಯಾಪಕರಂತೆ ಸಂಘಟನಾ ಕಾರ್ಯಾಗಾರದ ಎರಡನೇ ದಿನ ಪಾಠಕ್ಕೆ ನಿಂತ ಹೆಚ್ಡಿಕೆ ಅವರು, ನಿರ್ದಿಷ್ಟ ಕಾರ್ಯಸೂಚಿಯೊಂದಿಗೆ ತಮ್ಮ ಕನಸುಗಳನ್ನು ಬಿಚ್ಚಿಟ್ಟರು.

ರಾಜ್ಯದಲ್ಲಿ ಪ್ರಾದೇಶಿಕ ಪಕ್ಷದ ಶಕ್ತಿ ಬಗ್ಗೆ ಖುದ್ದು ಕುಮಾರಸ್ವಾಮಿ ಅವರಿಂದಲೇ ಪ್ರಾತ್ಯಕ್ಷಿಕೆ ಆಗಿದ್ದು ಎಲ್ಲಾ ಶಾಸಕರು, ಪ್ರತಿನಿಧಿಗಳಿಗೆ ಹೊಸ ಅನುಭವ ನೀಡಿತು, ಅವರು ಮಂಡಿಸಿದ ವಿಷಯಗಳಿಂದ ಬಹಳ ಪ್ರಭಾವಿತರಾದರು.

ದೇಶದಲ್ಲಿ ಪ್ರಾದೇಶಿಕ ರಾಜಕಾರಣಕ್ಕೆ ಹೆಚ್ಚು ಬಲವಿದೆ. ಅದರ ಮೂಲ ಬೇರುಗಳು ನಮ್ಮ ರಾಜ್ಯದಲ್ಲೇ ಇವೆ. ಜೆಡಿಎಸ್ ಈ ನಿಟ್ಟಿನಲ್ಲಿ ನಿರ್ಣಾಯಕ ಪಾತ್ರ ಪೋಷಿಸಲಿದೆ ಎಂದು ಮಾಜಿ ಮುಖ್ಯಮಂತ್ರಿಗಳು ಎಲ್ಲಾ ಮುಖಂಡರಿಗೆ ಉದಾಹರಣೆಗಳ ಮುಖೇನ ವಿವರಿಸಿದರು.

ಪ್ರಾದೇಶಿಕ ಪಕ್ಷ ಅಧಿಕಾರಕ್ಕೆ ಬಂದರೆ ಹೈಕಮಾಂಡ್ ಸಂಸ್ಕೃತಿ ಇರೋದಿಲ್ಲ. ಕನ್ನಡಿಗರ ಕೈಯ್ಯಲ್ಲಿಯೇ ಅಧಿಕಾರ ಇರುತ್ತದೆ. ಪ್ರತಿಯೊಂದಕ್ಕೂ ದಿಲ್ಲಿ ಕಡೆ ನೋಡಬೇಕಾಗಿಲ್ಲ. ಪ್ರಾದೇಶಿಕ ಪಕ್ಷ ಅಧಿಕಾರಕ್ಕೆ ಬಂದರೆ ಐತಿಹಾಸಿಕ ನಿರ್ಧಾರ ಗಳನ್ನು ಹೈಕಮಾಂಡ್ ಹಂಗಿಲ್ಲದೆ ತೆಗೆದುಕೊಳ್ಳಬಹುದು ಎಂದವರು ಹೇಳಿದರು.

ಜನರ ಸಮಸ್ಯೆಗಳ ಪರಿಹಾರಕ್ಕೆ ಆದ್ಯತೆ ನೀಡೋಣ. ಕಾಲಮಿತಿಯಲ್ಲಿ ಅವುಗಳ ಪರಿಹಾರಕ್ಕೆ ಭರವಸೆ ಕೊಡೋಣ. ನೀರಾವರಿ ಯೋಜನೆಗಳು ಮತ್ತು ರೈತ ಪರ ಯೋಜನೆಗಳು ನಮ್ಮ ಪಕ್ಷದ ಮೊದಲ ಆದ್ಯತೆ ಎಂದರಲ್ಲದೆ, ಈ ನಿಟ್ಟಿನಲ್ಲಿ ಅಭ್ಯರ್ಥಿಗಳು ಜನರ ಬಳಿಗೆ ಹೋಗಬೇಕು. ಪಕ್ಷದ ಕಾರ್ಯಕ್ರಮಗಳನ್ನು ಮನವರಿಕೆ ಮಾಡಿಕೊಡಬೇಕು ಎಂದವರು ತಾಕೀತು ಮಾಡಿದರು.

ರಾಜ್ಯದ ಐದು ನೀರಾವರಿ ಯೋಜನೆಗಳಿಗೆ ಜೀವ ತುಂಬುವುದು ನಮ್ಮ ಮಹತ್ವದ ನಿಲುವು. ಮೇಕೆದಾಟು, ಯುಕೆಪಿ, ಮಹದಾಯಿ, ಎತ್ತಿನಹೊಳೆ ಯೋಜನೆಗಳನ್ನು ಕ್ಷಿಪ್ರವಾಗಿ ಕಾರ್ಯಗತಗೊಳಿಸುವ ಭರವಸೆಯೊಂದಿಗೆ ಮುಂದಕ್ಕೆ ಹೋಗೋಣ ಎಂದವರು ತಿಳಿಸಿದರು.

# ಮಕ್ಕಳ ಕಲ್ಯಾಣ ಸೇವೆ ನಿರತರಿಗೆ ರಾಜ್ಯ ಮಟ್ಟದ ಪ್ರಶಸ್ತಿಗೆ ಆಹ್ವಾನ

ದಾವಣಗೆರ, ಸೆ.28- ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಪ್ರಸಕ್ತ ಸಾಲಿನಲ್ಲಿ ವ್ಯಕ್ತಿ ಹಾಗೂ ಸಂಸ್ಥೆಗಳಿಗೆ ನೀಡುವ ಪ್ರಶಸ್ತಿಗಳಿಗೆ ಅರ್ಜಿ ಆಹ್ವಾನಿಸಲಾಗಿದ್ದು, ರಾಜ್ಯ ಪ್ರಶಸ್ತಿಗೆ ಮಕ್ಕಳ ಕಲ್ಯಾಣ ಕ್ಷೇತ್ರದ ಸೇವೆಯಲ್ಲಿ ನಿರತರಾಗಿರುವ ಸಮಾಜ ಸೇವಾ ಕಾರ್ಯಕರ್ತರು ಹಾಗೂ ಸ್ವಯಂ ಸೇವಾ ಸಂಸ್ಥೆಗಳ ಸೇವೆಯನ್ನು ಗುರುತಿಸಿ, ರಾಜ್ಯ ಸರ್ಕಾರದಿಂದ ಪ್ರಶಸ್ತಿ ನೀಡುವ ಯೋಜನೆಯಡಿ ಅರ್ಜಿ ಆಹ್ವಾನಿಸಿದ್ದು, ಪ್ರಶಸ್ತಿಗೆ ಆಯ್ಕೆಯಾದ ಸಂಸ್ಥೆಗಳಿಗೆ ರೂ.1 ಲಕ್ಷ ನಗದು ಬಹುಮಾನ ಹಾಗೂ ಪ್ರಶಸ್ತಿ ಪತ್ರ. ವ್ಯಕ್ತಿಗೆ ನೀಡುವ ಪ್ರಶಸ್ತಿಗೆ ರೂ. 25 ಸಾವಿರ ನಗದು ಬಹುಮಾನ ನೀಡಲಾಗುವುದು.

ಅರ್ಜಿಯನ್ನು ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಪಡೆದು, ಅಕ್ಟೋಬರ್ 11 ರೊಳಗೆ ಸಲ್ಲಿಸಬೇಕು. ಮಾಹಿತಿಗೆ ದೂರವಾಣಿ 08192-264056 ಗೆ ಸಂಪರ್ಕಿಸಬಹುದು.

# ರಾಣೇಬೆನ್ನೂರಿನಲ್ಲಿ ಉದ್ಯೋಗ ಮೇಳ



ರಾಣೇಬೆನ್ನೂರು, ಸೆ.28- ವಿಧಾನಸಭೆ ಮಾಜಿ ಅಧ್ಯಕ್ಷ ಕೆ.ಬಿ. ಕೋಳಿವಾಡ ಹುಟ್ಟುಹಬ್ಬವಾದ ನವೆಂಬರ್ 1ರಂದು ಅವರ ಪುತ್ರ ಪ್ರಕಾಶ ಕೋಳಿವಾಡ ಅವರ ಪಿಕೆಕೆ ಇನ್ನಿಯೇಟಿವ್‌ನಿಂದ ಕೌಶಲ್ಯ ತರಬೇತಿ ಹಾಗೂ ಉದ್ಯೋಗ ಮೇಳವನ್ನು ಚನ್ನೇಶ್ವರ ಕಲ್ಯಾಣ ಮಂಟಪದಲ್ಲಿ ಏರ್ಪಡಿಸಲಾಗಿದೆ ಎಂದು ತಾಲ್ಲೂಕು ಕಾಂಗ್ರೆಸ್ ಮುಖಂಡ ಮಂಜನಗೌಡ ಪಾಟೀಲ ತಿಳಿಸಿದ್ದಾರೆ.

# ಆಜಾದಿ ಕಾ ಅಮೃತ್ ಮಹೋತ್ಸವ : 3 ದಿನಗಳ ವಿವಿಧ ಕಾರ್ಯಕ್ರಮ

ದಾವಣಗೆರೆ, ಸೆ.28 - ದಾವಣಗೆರೆ ಸ್ಮಾರ್ಟ್ ಸಿಟಿ ಲಿಮಿಟೆಡ್ ವತಿಯಿಂದ ಕೇಂದ್ರ ಸರ್ಕಾರದ ಮಾರ್ಗದರ್ಶನದಂತೆ ವಿವಿಧ ಇಲಾಖೆಗಳ ಸಹಯೋಗದೊಂದಿಗೆ 'ಆಜಾದಿ ಕಾ ಅಮೃತ್ ಮಹೋತ್ಸವ' ಅಂಗವಾಗಿ 3 ದಿನಗಳ ಕಾಲ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ನಾಳೆ ದಿನಾಂಕ 29 ರಿಂದ ಅಕ್ಟೋಬರ್ 1 ರವರೆಗೆ 3 ದಿನಗಳ ಕಾಲ ವಿವಿಧ ಕಾರ್ಯಕ್ರಮಗಳನ್ನು ನಗರದ ಗುರುಭವನ ರಸ್ತೆ ಹಾಗೂ ಮತ್ತಿತರೆಡೆಗಳಲ್ಲಿ ಆಯೋಜಿಸಲಾಗಿದ್ದು, ನಾಳೆ ಬುಧವಾರ ಮಧ್ಯಾಹ್ನ 12 ರಿಂದ 1 ಗಂಟೆಯವರೆಗೆ ಕಾರ್ಯಕ್ರಮದ ಉದ್ಘಾಟನೆ, 3 ದಿನಗಳ ಈ ಸಂಭ್ರಮಾಚರಣೆಯಲ್ಲಿ ಮನೋರಂಜನೆ ಜೊತೆಗೆ ಸಾರ್ವಜನಿಕರಲ್ಲಿ ಅರಿವು-ಜಾಗೃತಿ ಮೂಡಿಸುವಂತಹ ಅನೇಕ ಯೋಜನೆಗಳನ್ನು ರೂಪಿಸಲಾಗಿದೆ.

ವಿದ್ಯಾರ್ಥಿಗಳು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವುದರ ಮೂಲಕ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವಂತೆ ಸ್ಮಾರ್ಟ್ ಸಿಟಿ ಯೋಜನೆ ವ್ಯವಸ್ಥಾಪಕ ನಿರ್ದೇಶಕ ರವೀಂದ್ರ ಮಲ್ಲಾಪುರ ಮನವಿ ಮಾಡಿದ್ದಾರೆ.

# ಚನ್ನಗಿರಿ : ಐಟಿಐ ಪ್ರವೇಶಕ್ಕೆ ಅರ್ಜಿ ಆಹ್ವಾನ

ಚನ್ನಗಿರಿ, ಸೆ.28- ಚನ್ನಗಿರಿಯ ಸರ್ಕಾರಿ ಕೈಗಾರಿಕಾ ಸಂಸ್ಥೆ (ಐಟಿಐ) ಯಲ್ಲಿ ಪ್ರಸಕ್ತ ಶೈಕ್ಷಣಿಕ ಸಾಲಿಗೆ ಐಟಿಐ ಪ್ರವೇಶಕ್ಕಾಗಿ ಆನ್‌ಲೈನ್‌ನಲ್ಲಿ ಭರ್ತಿಯಾಗದೇ ಖಾಲಿ ಉಳಿದಿರುವ ಎನ್‌ಸಿವಿಟಿ ಯಿಂದ ಸಂಯೋಜನೆ ಪಡೆದ ಎಲೆಕ್ಟ್ರೀಷಿಯನ್, ಫಿಟ್ಟರ್ ಮತ್ತು ಎಂ.ಆರ್ ಮತ್ತು ಎ.ಸಿ ವೃತ್ತಿಗಳ ಸ್ಥಾನಗಳಿಗೆ ಆಫ್‌ಲೈನ್ ನಲ್ಲಿ ಪ್ರವೇಶಾತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ. ನಾಳೆ ದಿನಾಂಕ 29 ಅರ್ಜಿ ಸಲ್ಲಿಕೆಗೆ ಕೊನೆಯ ದಿನಾಂಕ. ಮಾಹಿತಿಗೆ ದೂ.ಸಂ : 8217608288 ಮತ್ತು 9844960638 ಇವರನ್ನು ಸಂಪರ್ಕಿಸಬಹುದು.


## ಸಾರ್ವಜನಿಕ ಪ್ರಕಟಣೆ

ಶ್ರೀಮತಿ ಹಿರಿಯಮ್ಮ ಬಿನ್ ಲೇಟ್ ಸಣ್ಣದುರುಗಪ್ಪ, ಎಲೋದಹಳ್ಳಿ ಗ್ರಾಮ ವಾಸಿ, ಚನ್ನಗಿರಿ ತಾಲ್ಲೂಕು, ಇವರು ದಾವಣಗೆರೆ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, (ಕಿರಿಯ ವಿಭಾಗ)ದಲ್ಲಿ ಪ್ರಕರಣ ಸಂಖ್ಯೆ : ಓ.ಎಸ್. ನಂ. : 431/2021 ರಲ್ಲಿ ಪ್ರತಿವಾದಿಗಳಾದ ಡಿ. ಶೇಖರಪ್ಪ, ಡಿ. ಹನುಮಂತಪ್ಪ, ಶ್ರೀಮತಿ ರಂಗಮ್ಮ, ಶ್ರೀಮತಿ ಸೌಭಾಗ್ಯಮ್ಮ, ಬಿನ್ ಲೇಟ್ ಸಣ್ಣದುರುಗಪ್ಪ ಹಾಗೂ ಎಸ್.ಜೆ. ವೇದಮೂರ್ತಿ ಹಾಗೂ ಎ.ಎಂ. ಜಯದೇವಪ್ಪ ಬಿನ್ ಲೇಟ್ ಮರಿಕಲ್ಲಪ್ಪ ಇವರುಗಳ ವಿರುದ್ಧ ಷೆಡ್ಯೂಲ್ ಸೊತ್ತಿನಲ್ಲಿ ಪಾಲು ವಿಭಾಗ ಕೋರಿ ದಾವೆಯನ್ನು ಸಲ್ಲಿಸಿರುತ್ತಾರೆ. ಈ ದಾವೆಯೊಂದಿಗೆ ವಾದಿ 6ನೇ ಪ್ರತಿವಾದಿ ಎ.ಎಂ. ಜಯದೇವಪ್ಪ ಬಿನ್ ಲೇಟ್ ಮರಿಕಲ್ಲಪ್ಪ ಇವರು ಷೆಡ್ಯೂಲ್ ಸೊತ್ತನ್ನು ಸಾರ್ವಜನಿಕರಿಗೆ ಯಾರಿಗೇ ಆಗಲೀ ಮಾರಾಟ ಮಾಡದಂತೆ ಪ್ರತಿಬಂಧಕಾಜ್ಞೆಯನ್ನು ಕೋರಿ ನ್ಯಾಯಾಲಯದಲ್ಲಿ ಉಪ ಅರ್ಜಿಯನ್ನು ಸಲ್ಲಿಸಿದ್ದು, ಸದರಿ ಅರ್ಜಿ ವಿಚಾರಣೆಗೆ ಬಾಕಿ ಇರುತ್ತದೆ.

ಆದ್ದರಿಂದ ವಾದಿ ಸಾರ್ವಜನಿಕರಿಗೆ ಮನವಿ ಮಾಡಿಕೊಳ್ಳುವುದೇನೆಂದರೆ, ಸಾರ್ವಜನಿಕರು ಯಾರೇ ಆಗಲೀ ಷೆಡ್ಯೂಲ್ ಸೊತ್ತನ್ನು ಯಾವುದೇ ರೀತಿ ಕ್ರಯಕ್ಕೆ, ಭೋಗ್ಯಕ್ಕೆ, ದಾನ, ವಗೈರೆಗಳಿಗೆ ಪಡೆಯದಂತೆ ಕೋರಿರುತ್ತಾರೆ. ಒಂದು ವೇಳೆ ಸಾರ್ವಜನಿಕರು ಈ ಪ್ರಕಟಣೆಯ ನಂತರ ಯಾವುದೇ ರೀತಿ ವ್ಯವಹರಿಸಿದ್ದಲ್ಲಿ ಅದರಿಂದ ಉಂಟಾಗಬಹುದಾದ ಕಷ್ಟ-ನಷ್ಟಗಳಿಗೆ ಅವರುಗಳೇ ಜವಾಬ್ದಾರರಾಗಿರುತ್ತಾರೆ.

**ಷೆಡ್ಯೂಲ್ :** 1) ದಾವಣಗೆರೆ ಶ್ಯಾಮನೂರು ಗ್ರಾಮ, ರೀ. ಸರ್ವೆ ನಂ. : 258/2, ವಿಸ್ತೀರ್ಣ 1 ಎಕರೆ 24 1/2 ಗುಂಟೆ ಇದಕ್ಕೆ ಚಕ್ಕು ಬಂದಿ : ಪೂರ್ವಕ್ಕೆ : ಗೌಡ್ರ ಜಯಪ್ಪನವರ ಜಮೀನು, ಪಶ್ಚಿಮಕ್ಕೆ : ಡಿ. ಹನುಮಂತಪ್ಪನ ಜಮೀನು, ಉತ್ತರಕ್ಕೆ : ದಾಗಿನಕಟ್ಟೆ ರಂಗಪ್ಪನ ಜಮೀನು, ದಕ್ಷಿಣಕ್ಕೆ : ಗಿಡ್ಡ ಸಿದ್ದಪ್ಪ ಸಣ್ಣ ಸಿದ್ದಪ್ಪನ ಜಮೀನು. 2) ದಾವಣಗೆರೆ ಶ್ಯಾಮನೂರು ಗ್ರಾಮ, ರೀ. ಸರ್ವೆ ನಂ. : 258/3, ವಿಸ್ತೀರ್ಣ 1ಎಕರೆ 20 ಗುಂಟೆ ಇದಕ್ಕೆ ಚಕ್ಕುಬಂದಿ : ಪೂರ್ವಕ್ಕೆ : ಎಸ್.ಬಿ. ವೇದಮೂರ್ತಿ ಇವರ ಜಮೀನು, ಪಶ್ಚಿಮಕ್ಕೆ ; ಡಿ. ಹನುಮಂತಪ್ಪನ ಜಮೀನು, ಉತ್ತರಕ್ಕೆ : ದಾಗಿನಕಟ್ಟೆ ರಂಗಪ್ಪ ಜಮೀನು, ದಕ್ಷಿಣಕ್ಕೆ : ಹನುಮಂತಪ್ಪನ ಜಮೀನು.

**ದಿನಾಂಕ : 29.09.2021**
**ಸ್ಥಳ : ದಾವಣಗೆರೆ.**

ಸಹಿ/- ಅಜಯ್ ಸಿ., ಕೆ.ಬಿ. ಸುಬ್ರಮಣ್ಯ, ವಕೀಲರು
#867/1B, ಪೂಜಾ ಇಂಟರ್‌ನ್ಯಾಷನಲ್ ಹೋಟೆಲ್ ಪಕ್ಕ, ಮಹೇಶ್ ಕಾಂಪ್ಲೆಕ್ಸ್,
1ನೇ ಮಹಡಿ, ಪಿ.ಬಿ. ರಸ್ತೆ, ದಾವಣಗೆರೆ-5. ಫೋ : 97430 19896








# ಕಣ್ಣುಗಳ ಆರೈಕೆಗೆ ಆದ್ಯತೆ ನೀಡಿ



## ಹರಪನಹಳ್ಳಿಯ ಹಿರಿಯ ಸಿವಿಲ್ ನ್ಯಾಯಾಧೀಶರಾದ ಎಂ. ಭಾರತಿ

ಹರಪನಹಳ್ಳಿ, ಸೆ.28- ಪಂಚೇಂದ್ರಿಯಗಳಲ್ಲಿ ಅತ್ಯಂತ ಮಹತ್ವವಾದ ಅಂಗ ಕಣ್ಣು. ಕಣ್ಣು ಇದ್ದರೆ ಸುಂದರವಾದ ಪ್ರಪಂಚ ನೋಡಲು ಸಾಧ್ಯ. ನಾವುಗಳು ಕಣ್ಣುಗಳನ್ನು ಬಹಳ ಸುರಕ್ಷತೆಯಿಂದ ನೋಡಿಕೊಳ್ಳಬೇಕು ಎಂದು ಹಿರಿಯ ಸಿವಿಲ್ ನ್ಯಾಯಾಧೀಶರಾದ ಎಂ. ಭಾರತಿ ಹೇಳಿದರು.

ಪಟ್ಟಣದ ನ್ಯಾಯಾಲಯದ ಆವರಣದಲ್ಲಿರುವ ವಕೀಲರ ಸಂಘದ ಕಛೇರಿಯಲ್ಲಿ ತಾಲ್ಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ, ಕಠಾರೆ ಐ ಆಪ್ಟಿಕಲ್ಸ್ ಇವರ ಸಂಯುಕ್ತಾಶ್ರದಲ್ಲಿ ಆಯೋಜಿಸಲಾಗಿದ್ದ ಉಚಿತ ನೇತ್ರ ತಪಾಸಣೆ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು.

ಮೊಬೈಲ್, ಕಂಪ್ಯೂಟರ್ ಹೆಚ್ಚು ಬಳಕೆಯಿಂದ ಯುವಕರ ಹಾಗೂ ಮಕ್ಕಳ ಕಣ್ಣಿನ ಮೇಲೆ ದುಷ್ಪರಿಣಾಮ ಬೀರುತ್ತಿದೆ. ಯೋಗ ಹಾಗೂ ಉತ್ತಮ ಆಹಾರದ ಮೂಲಕ ನಮ್ಮ ಕಣ್ಣುಗಳನ್ನು ಕಾಪಾಡಿಕೊಳ್ಳಬೇಕು.

ಕಿರಿಯ ಸಿವಿಲ್ ನ್ಯಾಯಾಧೀಶರಾದ ಪಕ್ಕೀರವ್ವ ಕೆಳಗೇರಿ, ವಕೀಲರ ಸಂಘದ ಅಧ್ಯಕ್ಷ ಕೆ. ಚಂದ್ರೇಗೌಡ, ಕಠಾರೆ ಐ ಆಪ್ಟಿಕಲ್ಸ್ ಕಂಪನಿಯ ವ್ಯವಸ್ಥಾಪಕ ಮೋಹನ್ ಸಿ.ಎ. ಮಾತನಾಡಿದರು. ಸಹಾಯಕ ಸರ್ಕಾರಿ ಅಭಿಯೋಜಕ ಎನ್. ಮೀನಾಕ್ಷಿ, ಅಪರ ಸರ್ಕಾರಿ ವಕೀಲ ವಿ.ಜಿ. ಪ್ರಕಾಶ್ ಗೌಡ, ವಕೀಲರ ಸಂಘದ ಉಪಾಧ್ಯಕ್ಷ ಟಿ. ವೆಂಕಟೇಶ್, ವಕೀಲರುಗಳಾದ ಗಂಗಾಧರ್ ಗುರುಮಠ, ಮತ್ತಿಹಳ್ಳಿ ಅಜ್ಜಪ್ಪ, ಕೆ. ಜಗದಪ್ಪ, ಬಿ. ರೇವನಗೌಡ್ರು, ಕೆ.ಚಂದ್ರಮೌಳಿ, ಎಸ್.ಎಂ. ರುದ್ರಮನಿ, ಜಗದೀಶ್ ಗೌಡ್ರು, ಬಿ. ಹಾಲೇಶ್, ಎಂ. ಮೃತುಂಜಯ, ಬಾಗಳಿ ಮಂಜುನಾಥ್, ವಾಮದೇವ, ನ್ಯಾಯಾಲಯದ ಸಿಬ್ಬಂದಿಗಳಾದ ರೇವಣಸಿದ್ದಪ್ಪ, ಬಸವರಾಜ್, ಕೊಟ್ರೇಶ್, ಮಲ್ಲಿಕಾರ್ಜುನ್ ಇನ್ನಿತರರಿದ್ದರು.

# ದೀನದಯಾಳ್ ಉಪಾಧ್ಯಾಯ ಜನ್ಮದಿನಾಚರಣೆ ಪ್ರಯುಕ್ತ 105 ದೀಪಗಳ ಬೆಳಕು



ದಾವಣಗೆರೆ, ಸೆ.28- ನಗರದ 24ನೇ ವಾರ್ಡಿನ ಬಿಜೆಪಿ ವಾರ್ಡ್ ಕಮಿಟಿ ವತಿಯಿಂದ ದೀನದಯಾಳ್ ಉಪಾಧ್ಯಾಯ ಅವರ 105ನೇ ಜನ್ಮ ದಿನಾಚರಣೆ ಪ್ರಯುಕ್ತ ಇಲ್ಲಿನ ರಾಮ್ ಅಂಡ್ ಕೋ ವೃತ್ತದಲ್ಲಿ 105 ದೀಪಗಳನ್ನು ಬೆಳಗುವ ಮೂಲಕ ದೀಪದಿಂದ ಕಮಲದವರೆಗೆ ಎಂಬ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಈ ಸಂದರ್ಭದಲ್ಲಿ ಬಿಜೆಪಿಯ ರಾಜ್ಯ ಕಾರ್ಯದರ್ಶಿ ಸುಧಾ ಜಯರುದ್ರೇಶ್, ನಗರ ಪಾಲಿಕೆ ಸದಸ್ಯ ಕೆ. ಪ್ರಸನ್ನ ಕುಮಾರ್, ಆರ್. ಶಿವಾನಂದ, ಬಿಜೆಪಿ ಉತ್ತರ ಮಂಡಲ ಪ್ರಧಾನ ಕಾರ್ಯದರ್ಶಿ ಹನುಮಂತಪ್ಪ, ಮಹಾಶಕ್ತಿ ಕೇಂದ್ರದ ಪ್ರಮುಖ ಪದ್ಮನಾಭ ಶೆಟ್ಟಿ, ಶೇಖರ್ ಉಪ್ಪಿನ್, ಕಿರಣ್ ಕುಮಾರ್, ಯುವ ಮೋರ್ಚಾ ಅಧ್ಯಕ್ಷ ಸಚಿನ್ ವೆರ್ಣೆಕರ್, ಪದಾಧಿಕಾರಿಗಳಾದ ರಾಜು, ವರುಣ್, ಅನಿಲ್, ವಿವೇಕ್, ಕಾರ್ತಿಕ್, ಸಾಗರ್, ದರ್ಶನ್, ಚಂದ್ರು ಸೇರಿದಂತೆ ಇತರರು ಇದ್ದರು.

# ಎಸ್ಸೆಸ್ಸೆಂಗೆ ಕೆಪಿಸಿಸಿ ಕಾರ್ಯಾಧ್ಯಕ್ಷ ಸ್ಥಾನ ನೀಡಿದರೆ ರಾಜ್ಯದಲ್ಲಿ ಕಾಂಗ್ರೆಸ್‌ಗೆ ಬಲ



ದಾವಣಗೆರೆ, ಸೆ.28 - ವೀರಶೈವ ಲಿಂಗಾಯತರಾಗಿರುವ ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಅವರಿಗೆ ಕೆಪಿಸಿಸಿ ಕಾರ್ಯಾಧ್ಯಕ್ಷ ಸ್ಥಾನ ನೀಡಿದರೆ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಬಲಗೊಂಡು, ಅಧಿಕಾರಕ್ಕೆ ಬರುವುದು ನಿಶ್ಚಿತ ಎಂದು ಕೆಪಿಸಿಸಿ ಸದಸ್ಯ ಹೆಚ್. ದುಗ್ಗಪ್ಪ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಇತ್ತೀಚಿಗೆ ಮಲ್ಲಿಕಾರ್ಜುನ್ ಅವರು 54ನೇ ಹುಟ್ಟು ಹಬ್ಬ ಆಚರಿಸಿಕೊಂಡು ರಾಜ್ಯಾದ್ಯಂತ ಅವರ ಅಭಿಮಾನಿಗಳಿಂದ, ಪಕ್ಷದ ಮುಖಂಡರಿಂದ ಶುಭ ಹಾರೈಕೆ ಪಡೆದಿದ್ದಾರೆ.

ಅವರು ಪಕ್ಷದಲ್ಲಿ ಉನ್ನತ ಹುದ್ದೆ ಅಲಂಕರಿಸಿ, ಕಾಂಗ್ರೆಸ್ ಪಕ್ಷವನ್ನು ರಾಜ್ಯದಲ್ಲಿ ಮತ್ತಷ್ಟು ಬಲಪಡಿಸಿ, ಅಧಿಕಾರಕ್ಕೆ ತರಲಿ ಎಂಬುದು ಎಲ್ಲರ ಹಾರೈಕೆಯಾಗಿದೆ. ವೀರಶೈವ ಲಿಂಗಾಯತರಿಗೆ ಕಾಂಗ್ರೆಸ್ ಉನ್ನತ ಸ್ಥಾನ ನೀಡಿದ್ದೇ ಆದಲ್ಲಿ ರಾಜ್ಯದಲ್ಲಿ ಪಕ್ಷ ಅಧಿಕಾರಕ್ಕೆ ಬರುವುದು ಶತಃಸಿದ್ಧ ಎಂದವರು ಅಭಿಪ್ರಾಯಿಸಿದ್ದಾರೆ.

ದೇಶದಲ್ಲಿ ಬಿಜೆಪಿ ಸಮಪಾಲು, ಸಮಬಾಳು ಎಂಬ ಸೂತ್ರದಡಿ ಬಹುಸಂಖ್ಯಾತ ವೀರಶೈವ ಸಮಾಜ, ದಲಿತರು, ಹಿಂದುಳಿದ ವರ್ಗದವರು ಎಂದು ಕಡೆಗಣಿಸದೇ ಅಧಿಕಾರ ನೀಡಿರುವುದರಿಂದ ಕೇಂದ್ರ ಮತ್ತು ಹಲವು ರಾಜ್ಯಗಳಲ್ಲಿ ಬಿಜೆಪಿ ಅಧಿಕಾರಕ್ಕೆ ಬರುವುದಕ್ಕೆ ಸಾಧ್ಯವಾಗಿದೆ.

ಅಧಿಕಾರ ಹಂಚಿಕೆ ಸೂತ್ರದಡಿ ಬಿಜೆಪಿ ಬಲಿಷ್ಠಗೊಂಡು ಬೆಳೆಯುತ್ತಿದೆ. ಬಿಜೆಪಿಯನ್ನು ಕಾಂಗ್ರೆಸ್ ಅನುಸರಿಸಿದ್ದೇ ಆದಲ್ಲಿ ಕಾಂಗ್ರೆಸ್ ಕೂಡ ಬಲಗೊಳ್ಳಲಿದೆ ಎಂದವರು ಹೇಳಿದ್ದಾರೆ.

ಬಹುಸಂಖ್ಯಾತ ವೀರಶೈವ ಸಮಾಜದ ಮನವೊಲಿಸಲು ಎಸ್.ಎಸ್. ಮಲ್ಲಿಕಾರ್ಜುನ್ ಅವರನ್ನು ಈ ಕೂಡಲೇ ಕಾರ್ಯಾಧ್ಯಕ್ಷ ಸ್ಥಾನಕ್ಕೆ ನೇಮಕ ಮಾಡಿ ಆದೇಶ ಹೊರಡಿಸಬೇಕು. ಆಗ ವೀರಶೈವ ಸಮಾಜದವರು ಪಕ್ಷವನ್ನು ಬೆಂಬಲಿಸುವುದರಲ್ಲಿ ಅನುಮಾನವೇ ಇಲ್ಲ ಎಂದು ಅವರು ತಿಳಿಸಿದ್ದಾರೆ.

# ಪುಸ್ತಕ ಪ್ರಕಟಣೆ ಕಷ್ಟದ ಉದ್ಯಮ



## ಸಿದ್ದಗಂಗಾ ಶಾಲೆಯಲ್ಲಿನ ನಾಲ್ಕು ಕಾದಂಬರಿಗಳ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಡಾ. ನಾ. ಡಿಸೋಜ

ದಾವಣಗೆರೆ, ಸೆ. 28- ಪುಸ್ತಕ ಪ್ರಕಟಣೆ ಕಷ್ಟದ ಉದ್ಯಮವಾಗಿದ್ದು, ಇತ್ತೀಚಿನ ದಿನಗಳಲ್ಲಿ ಪುಸ್ತಕ ಓದುವ, ಅಧ್ಯಯನ ಮಾಡುವ ಮತ್ತು ಪ್ರೀತಿಯಿಂದ ಎದೆಗೊತ್ತಿಕೊಳ್ಳುವ ಮನೋಭಾವ ಕಡಿಮೆಯಾಗುತ್ತಿದೆ ಎಂದು ಹೆಸರಾಂತ ಹಿರಿಯ ಲೇಖಕ ಡಾ. ನಾ. ಡಿಸೋಜ ವಿಷಾದ ವ್ಯಕ್ತಪಡಿಸಿದರು.

ನಗರದ ಸಿದ್ಧಗಂಗಾ ವಿದ್ಯಾಸಂಸ್ಥೆ ವತಿಯಿಂದ ಕಳೆದ ವಾರ ಹಮ್ಮಿಕೊಂಡಿದ್ದ ಶಿಕ್ಷಕರಾದ ಡಿ.ಸಿ. ಚಂಪಾ ಅವರ ನಾಲ್ಕು ಕಾದಂಬರಿಗಳ ಲೋಕಾರ್ಪಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಪುಸ್ತಕ ಪ್ರಕಟಣೆ ಕಷ್ಟದ ಉದ್ಯಮವಾಗಿದ್ದರೂ ಸಹ ಕನ್ನಡ ಸಾಹಿತ್ಯಕ್ಕೆ ಒಳ್ಳೆಯ ದಿನಗಳ ಬರಲಿದ್ದು, ನಮ್ಮ ಜನ ಓದುವ, ಬರೆಯುವ, ಪುಸ್ತಕ ಪ್ರಕಟಿಸುವ ಕೆಲಸ ಮುಂದುವರೆಯಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ಚಂಪಾ ಅವರ ನಾಲ್ಕು ಕಾದಂಬರಿಗಳು ಒಟ್ಟಿಗೆ ಬಿಡುಗಡೆಗೊಂಡಿರುವುದು ಸಾಹಿತ್ಯ ಕ್ಷೇತ್ರದಲ್ಲಿಯೇ ಬಹುದೊಡ್ಡ ಘಟನೆ ಇದಾಗಿದೆ. ಇವರು ಬರೆದಿಟ್ಟಿರುವ ಕಾದಂಬರಿಗಳು ಲೋಕಾರ್ಪಣೆಗೊಳ್ಳಲಿ, ಸಾಹಿತ್ಯ ಕೃಷಿ ನಿರಂತರವಾಗಿ ಸಾಗಲಿ ಎಂದು ಶುಭ ಹಾರೈಸಿದರು.

ಕಾದಂಬರಿ ಎನ್ನುವ ಶಬ್ಧ ನಮ್ಮದಲ್ಲ. ಅದು ನಾವೆಲ್ ಎನ್ನುವ ಪರಕೀಯರಿಂದ ಬಂದಿದ್ದು, ಆ ಶಬ್ಧವನ್ನು ಪರದೇಶದವರಿಂದ ಸರಬರಾಜು ಮಾಡಿಕೊಳ್ಳಲಾಗಿದೆ. ತೆಲುಗಿನವರು ನಾವೆಲ್ ಅನ್ನು ನವಲಾ ಎಂದು, ಬಂಗಾಳಿಯಲ್ಲಿ ದೀರ್ಘ ಕಥನಾ, ಸಂಸ್ಕೃತದಲ್ಲಿ ಕಥಾ ವ್ಯಾಖ್ಯಾನ ಎಂದು ಕರೆಯಲಾಗುತ್ತದೆ. 140 ವರ್ಷಗಳ ಇತಿಹಾಸವಿರುವ ಕಾದಂಬರಿ ಇವತ್ತು ತುಂಬಾ ಜನಪ್ರಿಯವಾಗಿದೆ. ಜನ ಕಾದಂಬರಿ ಓದಲಿಕ್ಕೆ ಮುಗಿಬೀಳುತ್ತಿದ್ದಾರೆ ಎಂದರು.

'ಕೇಸರಿ ವಿಲಾಸ' ಎಂಬ ಮೊಟ್ಟ ಮೊದಲ ಕಾದಂಬರಿ 1895 ರಲ್ಲಿ ಬಿಡುಗಡೆಯಾಯಿತು. 1897 ರಲ್ಲಿ ಚೋರ ಗ್ರಹಣ ತಂತ್ರ ಪತ್ತೆದಾರಿ ಕಾದಂಬರಿ ಬಿಡುಗಡೆಗೊಂಡಿತು. ಒಳ್ಳೆಯ ಉದ್ದೇಶ ಹಾಗೂ ಆದರ್ಶಗಳನ್ನಿಟ್ಟುಕೊಂಡು ಈ ಕಾದಂಬರಿಗಳು ಬಿಡುಗಡೆಯಾದವು. 1915 ರಲ್ಲಿ ಎಂ.ಎಸ್. ಪುಟ್ಟಣ್ಣ ಅವರ 'ಮಾಡಿದ್ದುಣ್ಣೋ ಮಹಾರಾಯ' ಎಂಬ ಕನ್ನಡ ಕಾದಂಬರಿ ಪ್ರಕಟಗೊಂಡಿತು. ಮೊದಲ ಬಾರಿಗೆ ಗ್ರಾಮೀಣ ಜನರ ಜೀವನವನ್ನು ಚಿತ್ರೀಕರಿಸಿದ ಕಾದಂಬರಿಯಾಗಿತ್ತು. ಗ್ರಾಮೀಣ ಬದುಕಿಗೆ ಮೌಲ್ಯ ಸಿಗುವಂತೆ ಮಾಡಿತ್ತು ಎಂದು ಹೇಳಿದರು.

ಪ್ರತಿಯೊಂದು ಕಾದಂಬರಿ ಮನುಷ್ಯನ ಸಂಬಂಧಗಳನ್ನು ವಿವರಿಸುವುದರಿಂದ ಅವು ಹೆಚ್ಚು ಮೆಚ್ಚುಗೆಗೆ ಪಾತ್ರವಾಗುತ್ತವೆ. ಸಾಹಿತ್ಯ ಅಜ್ಞಾನವನ್ನು ಹೋಗಲಾಡಿಸಿ, ಸುಜ್ಞಾನವನ್ನು ಬಿತ್ತುವ ಕೆಲಸ ಮಾಡುತ್ತದೆ ಎಂದರು.

ಕಾದಂಬರಿಯ ಕರ್ತೃ, ಶಿಕ್ಷಕಿ ಡಿ.ಸಿ. ಚಂಪಾ ಅವರು ತಮ್ಮ ಅನಿಸಿಕೆ ವ್ಯಕ್ತಪಡಿಸಿದರು. ಹಿರಿಯ ಪತ್ರಕರ್ತ ಬಿ.ಎನ್. ಮಲ್ಲೇಶ್, ಲೇಖಕ ಜಗನ್ನಾಥ್ ನಾಡಿಗೇರ್, ಡಿಡಿಪಿಐ ಸಿ.ಆರ್. ಪರಮೇಶ್ವರಪ್ಪ, ಪ್ರಕಾಶಕ ರಾಮಕೃಷ್ಣ ನೇಕಾರ, ಸಿದ್ಧಗಂಗಾ ಪಿಯು ಕಾಲೇಜಿನ ನಿರ್ದೇಶಕ ಡಾ. ಡಿ.ಎಸ್. ಜಯಂತ್, ಸಿದ್ಧಗಂಗಾ ಸಂಸ್ಥೆ ಸಂಸ್ಥಾಪಕರಾದ ಜಸ್ಟಿನ್ ಡಿಸೋಜ, ಕನ್ನಡ ಅಧ್ಯಾಪಕಿ ಡಾ. ಶೋಭಾ ಚಪ್ಪರದಳ್ಳಿಮಠ, ಡಿ.ಎಸ್. ಪ್ರಶಾಂತ್, ಹೇಮಂತ್, ಶಿಕ್ಷಕ ನಾಗರಾಜ್ ಮತ್ತಿತರರಿದ್ದರು. ಇದೇ ವೇಳೆ ಪ್ರೀತಿ ಮೇಡಂ, ಮೋಡದೊಳಗಿನ ಮಿಂಚು, ಕೀರ್ತಿಯ ಬೆನ್ನೇರಿ, ಪ್ರತೀಕ್ಷ ಈ ನಾಲ್ಕು ಕಾದಂಬರಿಗಳು ಲೋಕಾರ್ಪಣೆಗೊಂಡವು.

ನಾಗರಾಜ್ ಪ್ರಾರ್ಥಿಸಿದರು. ರೇಖಾ ರಾಣಿ ನಿರೂಪಿಸಿದರು. ರೆವರೆಂಡ್ ಥಾಮಸ್ ಚಿಂದವಾಳ ಸ್ವಾಗತಿಸಿದರು.

## ಹೃದಯವಂತಿಕೆ

**(ಇಂದು ವಿಶ್ವ ಹೃದಯ ದಿನ)**

ದೇಹದಿ ಪ್ರಾಣವು ಇದೆಯೆಂಬುದಕೆ
ಜೀವಿಯ ಹೃದಯದ ಬಡಿತವೇ ಸಾಕ್ಷಿ,
ಇತರರ ನೋವಿನ ಪರಿ ತಿಳಿವುದಕೆ
ಅಂತರಂಗದ ಹೃದಯವೇ ಅಕ್ಷಿ.

ಆಡುವ ಮಾತೋ, ಮಾಡುವ ಕಾರ್ಯವೋ
ಹೃದಯ ಪೂರ್ವಕವೇ ಆಗಿರಲೆಂಬರು,
ನೋಡುವ ನೋಟವೊ, ನೀಡುವ ದಾನವೋ
ಹೃದಯ ಮುಟ್ಟಲು ಸಫಲವೆಂಬರು.

ನಾರಾಯಣನೇ ಹೃದಯ ಕಮಲದಲಿ
ಹೆಂಡತಿ ಲಕ್ಷ್ಮಿಗೆ ಸ್ಥಾನ ಕೊಟ್ಟಿರಲು,
ಗಂಡಸರೇಕೋ ಭೂ ಲೋಕದಲಿ
ಒಪ್ಪರು ಪತ್ನಿಗೆ ಮನ್ನಣೆ ಕೊಡಲು !

ಶಿಸ್ತಿನ ಬದುಕು, ಸಾತ್ವಿಕ ಚಿಂತನೆ
ರೂಢಿಸಿ, ದುಶ್ಚಟ ದೂರವಿಟ್ಟವನೆ,
ಮಿತಿಯಲಿ ಊಟ, ನಿಯಮಿತ ಆಟ
ಇಲ್ಲ ಅಂತವರ ಹೃದಯಕೆ ಕಾಟ.

ಜನಿಸಿದ ಎಲ್ಲರು ಹೃದಯವಂತರು
ಮಹತ್ವ ತಿಳಿದರೆ ಬುದ್ಧಿವಂತರು,
ನಿಮ್ಮ ಹೃದಯವು ನಿಮ್ಮೊಳಗೇ ಇದೆ
ಅದರ ರಕ್ಷಣೆಯ ಹೊಣೆಯೂ ನಿಮ್ಮದೆ.

- ಹೆಚ್.ಬಿ.ಮಂಜುನಾಥ
ಹಿರಿಯ ಪತ್ರಕರ್ತ

## ಶಿಕ್ಷಕರ ಸಂಘದ ಅಧ್ಯಕ್ಷರಾಗಿ ಬಸವರಾಜ



ಹರಪನಹಳ್ಳಿ, ಸೆ.28- ವಿಜಯನಗರ ಜಿಲ್ಲೆಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷರಾಗಿ ಸರ್ಕಾರಿ ನೌಕರರ ಸಂಘದ ರಾಜ್ಯ ಪರಿಷತ್ ಸದಸ್ಯ ಬಸವರಾಜ್ ಸಂಗಪ್ಪನವರ್ ಆಯ್ಕೆಯಾಗಿದ್ದಾರೆ.

# ಮರಿಕುಂಟೆಯಲ್ಲಿ ಜಂತುಹುಳು ನಿವಾರಣೆ ಪ್ರಚಾರಾಂದೋಲನ



## ಜಗಳೂರು

ಜಗಳೂರು, ಸೆ.28- ದಾವಣಗೆರೆ ಐಸಿಎಆರ್-ತರಳಬಾಳು ಕೃಷಿ ವಿಜ್ಞಾನ ಕೇಂದ್ರ ಹಾಗೂ ಏರ್‌ಬ್ಯಾಕ್ ಅನಿಮಲ್ ಹೆಲ್ತ್ ಇಂಡಿಯಾ ಪ್ರೈವೇಟ್ ಲಿ. ಬೆಂಗಳೂರು ಸಂಯುಕ್ತಾಶ್ರಯದಲ್ಲಿ ಭಾರತ್ ಅಮೃತ ಮಹೋತ್ಸವ ಕಾರ್ಯಕ್ರಮದಡಿ ಕುರಿ-ಮೇಕೆಗಳಲ್ಲಿ ಸಂಪೂರ್ಣ ಜಂತುಹುಳು ನಿವಾರಣೆಯ ಪ್ರಚಾರಾಂದೋಲನವನ್ನು ತಾಲ್ಲೂಕಿನ ಮರಿಕುಂಟೆ ಗ್ರಾಮದಲ್ಲಿ ಕೈಗೊಳ್ಳಲಾಗಿತ್ತು.

ಗ್ರಾಮದ ಸುತ್ತಮುತ್ತಲಿನ ಸುಮಾರು 75 ಕುರಿಗಾಹಿಗಳ 2000 ಕ್ಕೂ ಹೆಚ್ಚು ಕುರಿ ಮತ್ತು ಮೇಕೆಗಳಿಗೆ ಕಂಪೆನಿ ವತಿಯಿಂದ ಉಚಿತವಾಗಿ ಜಂತುಹುಳು ನಿವಾರಕ ಔಷಧಿಯನ್ನು ನೀಡಲಾಯಿತು. ಕಂಪನಿಯ ಏರಿಯಾ ಬ್ಯುಸಿನೆಸ್ ಮ್ಯಾನೇಜರ್ ಬಿ. ಓಂಪ್ರಕಾಶ್ ಮಾಹಿತಿ ನೀಡಿದರು.

ಅಧಿಕಾರಿ ಎನ್.ಎಸ್. ಸುರೇಶ್, ಕೃಷಿ ಕೇಂದ್ರದ ಪಶು ತಜ್ಞ ಡಾ. ಜಿ.ಕೆ. ಜಯದೇವಪ್ಪ, ಕುರಿಗಳಿಗೆ ಔಷಧಿ ನೀಡುವ ಮೂಲಕ ಆಂದೋಲನಕ್ಕೆ ಚಾಲನೆ ನೀಡಿದರು. ಗ್ರಾ.ಪಂ. ಸದಸ್ಯ ನಾಗರಾಜ್ ಉಪಸ್ಥಿತರಿದ್ದರು.

# ಎಸ್ಪಿಬಿಗೆ ಹಿಮೊಫಿಲಿಯಾದಿಂದ ನಮನ



ದಾವಣಗೆರೆ, ಸೆ. 28- ಕಳೆದ 21 ವರ್ಷಗಳಿಂದ ಕರ್ನಾಟಕ ಹಿಮೊಫಿಲಿಯಾ ಸೊಸೈಟಿಯ ಮಹಾಪೋಷಕರಾಗಿ ರೋಗಿಗಳ ನೋವನ್ನು ನಿವಾರಿಸಲು ಎಸ್.ಪಿ. ಬಾಲಸುಬ್ರಹ್ಮಣ್ಯಂ ಅವರು ಕೈಜೋಡಿಸಿದ್ದರು ಎಂದು ಕರ್ನಾಟಕ ಹಿಮೊಫಿಲಿಯಾ ಸೊಸೈಟಿಯ ಅಧ್ಯಕ್ಷ ಡಾ|| ಸುರೇಶ್ ಹನಗವಾಡಿ ತಿಳಿಸಿದರು.

ನಗರದ ಕರ್ನಾಟಕ ಹಿಮೊಫಿಲಿಯಾ ಸೊಸೈಟಿ ವತಿಯಿಂದ ಸಂಘದ ಕಚೇರಿಯಲ್ಲಿ ನಿನ್ನೆ ಏರ್ಪಡಿಸಿದ್ದ ಡಾ|| ಎಸ್ ಪಿ ಬಾಲಸುಬ್ರಮಣ್ಯಂ ಅವರ 1 ನೇ ವರ್ಷದ ಪುಣ್ಯಸ್ಮರಣೆ ಅಂಗವಾಗಿ ಎಸ್ ಪಿ ಬಿ ಪುಷ್ಪ ನಮನ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಡಾ|| ಎಸ್ ಪಿ ಬಿ ರವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವುದರ ಮೂಲಕ ಸಮಾರಂಭದಲ್ಲಿ ನೆರೆದಿದ್ದ ಎಲ್ಲಾ ಗಣ್ಯರು ನಮನ ಸಲ್ಲಿಸಿದರು.

ಎಸ್ ಪಿ ಬಿ ರವರು ಸೊಸೈಟಿಯೊಂದಿಗೆ ಆಯೋಜಿಸಿದ್ದ ಸಂಗೀತ ಕಾರ್ಯಕ್ರಮ, ಹಲವು ಸಮಾರಂಭಗಳ ವಿಡಿಯೋಗಳ ತುಣುಕುಗಳನ್ನು ಬಿತ್ತರಿಸುತ್ತಾ ಗಾನ ಗಾರುಡಿಗನನ್ನು ಸ್ಮರಿಸಿದ್ದು ವಿಶೇಷವಾಗಿತ್ತು.

ಉದ್ಯಮಿ ಬಿ.ಸಿ. ಉಮಾಪತಿ, ಶ್ರೀಮತಿ ಕಿರುವಾಡಿ ಗಿರಿಜಮ್ಮ, ಡಾ|| ಲಕ್ಷ್ಮಿಪತಿ, ರುದ್ರಪ್ಪ ಹನಗವಾಡಿ, ಗಿರೀಶ್ ನಾಡಿಗ್, ರಂಗಸ್ವಾಮಿ, ಪರಮೇಶ್ ಹವಳಿ, ಎಂ. ಕೊಟ್ರೇಶ್ ಮತ್ತಿತರರು ಉಪಸ್ಥಿತರಿದ್ದರು.

ಕರ್ನಾಟಕದ ಹಿಮೊಫಿಲಿಯಾ ಸೊಸೈಟಿ ಮಹಿಳಾ ವಿಭಾಗದ ಅಧ್ಯಕ್ಷರಾದ ಶ್ರೀಮತಿ ಡಾ|| ಮೀರಾ ಹನಗವಾಡಿ ಕಾರ್ಯಕ್ರಮ ನಿರೂಪಿಸಿದರು.

# ಮಲ್ಲೇಶಣ್ಣ ಅರಕೇರಿಗೆ 'ಉತ್ತಮ ವರ್ತಕ' ಪ್ರಶಸ್ತಿ



ರಾಣೇಬೆನ್ನೂರು, ಸೆ.28- ಗದಗ ಎಪಿಎಂಸಿಯ ಕೆ.ಎಚ್. ಪಾಟೀಲ ಸಭಾ ಭವನದಲ್ಲಿ ನಡೆದ ಉತ್ತರ ಕರ್ನಾಟಕ ವಾಣಿಜ್ಯೋದ್ಯಮಿಗಳ ಸಮ್ಮೇಳನದಲ್ಲಿ ರಾಣೇಬೆನ್ನೂರು ತಾಲ್ಲೂಕು ಸಾಧು ವೀರಶೈವ ಸಂಘದ ಅಧ್ಯಕ್ಷರು ಹಾಗೂ ಕಸ್ತೂರಿ ಏರೋನಾಟಿಕ್ಸ್ ಸಂಸ್ಥೆ ಮಾಲೀಕರಾದ ಎಂ.ಎಸ್. ಅರಕೇರಿ ಅವರಿಗೆ 'ಉತ್ತಮ ವರ್ತಕ ಪ್ರಶಸ್ತಿ' ನೀಡಿ ಗೌರವಿಸಲಾಯಿತು.

# ವಿದ್ಯಾನಗರ ರೋಟರಿ : ರಕ್ತ ತಪಾಸಣೆ

ವಿದ್ಯಾನಗರ ರೋಟರಿ ಸಂಸ್ಥೆ ಇವರ ಆಶ್ರಯದಲ್ಲಿ ಇಂದು ಬೆಳಿಗ್ಗೆ 9 ರಿಂದ ಶರಣ ಮಾಗನೂರು ಬಸಪ್ಪ ರೋಟರಿ ಭವನದಲ್ಲಿ ಸಕ್ಕರೆ ಮಟ್ಟದ ಅಂಶ ಗುರುತಿಸಲು ಉಚಿತ ರಕ್ತ ತಪಾಸಣೆ ಶಿಬಿರ ನಡೆಯಲಿದೆ ಎಂದು ಹೆಚ್.ಆಂಜನೇಯ ಮೂರ್ತಿ ಅಧ್ಯಕ್ಷರು (94486 68165), ರವಿಕುಮಾರ್ (88929 88989) ತಿಳಿಸಿದ್ದಾರೆ.


**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ :
ಮೊ.: 98453 17181

**TO-LET**
First Floor for Commercial/office Puropse, 25x45=1125sqft with attched Toilets, 3rd main, P.J.Extension, Near Chetana Hotel, Davanagere.
94484 81238, 63618 16497

**ನಿಮ್ಮ ಮನೆಯಲ್ಲಿ ನೀರು ಸೋರುತ್ತಿದೆಯೇ ?**
ನಿಮ್ಮ ಮನೆಯಲ್ಲಿ ಸೀಲಿಂಗ್, ಬಾತ್ ರೂಂ, ಟ್ಯಾಂಕ್ ಮತ್ತು ಹೊರಗಡೆ ಗೋಡೆ ಸೀಳಿರುವುದಕ್ಕೆ ಮತ್ತು ಯಾವುದೇ ರೀತಿಯ ನೀರಿನ ಲೀಕೇಜ್‌ಗೆ ಕಡಿಮೆ ಖರ್ಚಿನಲ್ಲಿ ಪರ್ಮನೆಂಟ್ ಆಗಿ ಸರಿ ಮಾಡಿಕೊಡಲಾಗುವುದು. ಗ್ಯಾರಂಟಿ ಇರುತ್ತದೆ. ನಿರಂತರವಾಗಿ 15 ವರ್ಷಗಳಿಂದ ಸೇವೆ.
ವಿಶ್ವಾಸಿ ಎಂಟರ್‌ಪ್ರೈಸಸ್ - 96065 57066

**5000 SQ.FT. BUILDING AVAILABLE**
for rent in P J Extension. Suitable for hospital/ offices. Contact :
94480 28103

**ಸೈಟ್ ಮಾರಾಟಕ್ಕೆ (21 ಲಕ್ಷಕ್ಕೆ)**
ದೈವಿಕ್ ಮೋತಿ ರಾಮ್ ರಾವ್ ಸಿಟಿ, ಬೈಪಾಸ್ (ಕುಂದವಾಡ)
30x50 (9x15) ಮೀ. ಪಶ್ಚಿಮ
30x50 (9x15) ಮೀ. ಉತ್ತರ
ಬೂಸ್ನೂರ್ ಕಿರಣ್ (ಏಜೆಂಟ್)
97315-63409, 98440-63409

**ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ನರ್ಸ್‌ಗಳು ಬೇಕಾಗಿದ್ದಾರೆ. ನುರಿತ, ಅನುಭವವುಳ್ಳ ಎ.ಎನ್.ಎಂ ಆದವರು ಈ ಕೆಳಗಿನ ವಿಳಾಸಕ್ಕೆ ತಮ್ಮ ಬಯೋಡೇಟಾದೊಂದಿಗೆ ಬಂದು ವಿಚಾರಿಸಿ.
ವಿಳಾಸ : ಸ್ಟೇಡಿಯಂ ಹತ್ತಿರ, ಪಿ.ಜೆ.ಬಡಾವಣೆ, ಚಿಗಟೇರಿ ಆಸ್ಪತ್ರೆ ಹಿಂಭಾಗ, ಪೆವಿಲಿಯನ್ ರಸ್ತೆ, ದಾವಣಗೆರೆ.
99024-52312, 98450-35710

**ಮನೆ ಬಾಡಿಗೆಗೆ ಇದೆ**
ನಿಜಲಿಂಗಪ್ಪ ಬಡಾವಣೆ, ನ್ಯಾಷನಲ್ ಕಾನ್ವೆಂಟ್ ಎದುರು, "ಕಾಯಕ ಸಿರಿ" ಗ್ರೌಂಡ್ ಫ್ಲೋರ್‌ನಲ್ಲಿ, 2 ಬೆಡ್ ರೂಂ ಮನೆ ಬಾಡಿಗೆಗೆ ಇದೆ. (ಸಸ್ಯಹಾರಿಗಳಿಗೆ ಮೊದಲ ಆದ್ಯತೆ)
63621 06700

**ಮಣಿಪಾಲ್ ಆರೋಗ್ಯ ಕಾರ್ಡ್**
ಹೊಸದಾಗಿ ಮಾಡಿಕೊಳ್ಳುವವರು ದಿನಾಂಕ: 30.9.2021ರ ಒಳಗೆ ಮಾಡಿಕೊಂಡರೆ ಮಾತ್ರ ದಿನಾಂಕ 15.10.2021 ರಿಂದ ರಿಯಾಯಿತಿ ಸೌಲಭ್ಯ ಪ್ರಾರಂಭ. ನಂತರ ಬಂದರೆ 15.11.21 ರಿಂದ ಪ್ರಾರಂಭ
ಸಂಪರ್ಕಿಸಿ: ಮಣಿಪಾಲ್ ಮಾಹಿತಿ ಕೇಂದ್ರ, ತ್ರಿಶೂಲ್ ಟಾಕೀಸ್ ರಸ್ತೆ, ದಾವಣಗೆರೆ.
97317 09177

**ವಿದ್ಯಾನಗರ ದಾಟಿ ಬನಶಂಕರಿ ಲೇಔಟ್‌ನಲ್ಲಿ**
30x40, 30x40, West ಅಕ್ಕ-ಪಕ್ಕ, 40 ಅಡಿ ರೋಡಿಗಿದೆ, 30x50, 30x50 West, ಅಕ್ಕ-ಪಕ್ಕ, 30x50 East
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಮನೆಗಳು ಮಾರಾಟಕ್ಕಿವೆ**
40x60 North, ಮೂರು ಬೆಡ್ ರೂಂ ಮನೆ ಕುವೆಂಪು ಬಡಾವಣೆಯಲ್ಲಿ, 30x40 West ಜಯನಗರದಲ್ಲಿ, 40x60 West, ನಾಲ್ಕು ಬೆಡ್ ರೂಂ ಮನೆ
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಬೇಕಾಗಿದ್ದಾರೆ**
1) ಮನೆ ಕೆಲಸಕ್ಕೆ ಲಿಂಗಾಯಿತ ಮಹಿಳೆಯರು ಬೇಕಾಗಿದ್ದಾರೆ.
2) ವಾಚ್‌ಮನ್ (ಹಗಲು ಮತ್ತು ರಾತ್ರಿ) ಬೇಕಾಗಿದ್ದಾರೆ
ಮೊ: 98808 53626

**ಮನೆ ಬಾಡಿಗೆಗೆ ಲಭ್ಯವಿದೆ**
ಸೋಲಾರ್ ಹಾಗೂ ಕಾರ್ಪೋರೇಷನ್ ಮತ್ತು ಬೋರ್‌ವೆಲ್ ನೀರಿನ ಸೌಲಭ್ಯವಿರುವ 1 ಬೆಡ್ ರೂಂ ಮನೆ ನೂತನವಾಗಿ ಕಟ್ಟಿಸಿರುವ ಬಿಲ್ಡಿಂಗ್‌ನಲ್ಲಿ ಸ್ವಾಮಿ ವಿವೇಕಾನಂದ ಬಡಾವಣೆ, 7ನೇ ಮೇನ್, ನಂ. 1868/13 ರಲ್ಲಿ ಬಾಡಿಗೆಗೆ ಲಭ್ಯವಿರುತ್ತದೆ.
ಸಂಪರ್ಕಿಸಿ : 88614 62603

**ಬೇಕಾಗಿದ್ದಾರೆ**
ಅನುಭವವುಳ್ಳ ಸ್ಟ್ಯಾಫ್ ನರ್ಸ್ ಬೇಕಾಗಿದ್ದಾರೆ.
Mob: 99725 23910

**ಮನೆ ಬಾಡಿಗೆಗೆ ಇದೆ**
ಎಸ್.ಕೆ.ಪಿ ರಸ್ತೆ, ಗಣೇಶ ಪೇಟೆ, ಬೇವಿನ ಮರದ ಎದುರು 3 ಬೆಡ್ ರೂಂ ಮನೆ ಬಾಡಿಗೆಗೆ ಇದೆ. (ಸಸ್ಯಹಾರಿಗಳಿಗೆ ಮೊದಲ ಆದ್ಯತೆ)
ವಿಚಾರಿಸಿ
63621 06700

**ಬೇಕಾಗಿದ್ದಾರೆ**
ದ್ವಿಚಕ್ರ ವಾಹನ ಇರುವ ಯುವಕರು ಬೇಕಾಗಿದ್ದಾರೆ. ಆಕರ್ಷಕ ಸಂಬಳ ಮತ್ತು ಇನ್ಸೆಂಟಿವ್ ದೊರೆಯುತ್ತದೆ.
ಸಂಪರ್ಕಿಸಿ
96864 12409
93796 58756

**REQUIRED**
GENTS AND LADIES WARDEN FOR HOSTEL
Location : DAVANGERE
CONTACT :
78999 17593

**ಮನೆ ಬಾಡಿಗೆಗೆ ಇದೆ**
2BHK ಸುಸಜ್ಜಿತ ಮನೆ ಬಸವೇಶ್ವರ ಬಡಾವಣೆ ಮುಖ್ಯರಸ್ತೆ, ಹೋಟೆಲ್ ಸಾಯಿ ಇಂಟರ್ ನ್ಯಾಷನಲ್ ಹಿಂಭಾಗ, ದಾವಣಗೆರೆ ಇಲ್ಲಿ ಬಾಡಿಗೆಗಿದೆ.
ಸಂಪರ್ಕಿಸಿ: 98441 32621

**ಮಾರಾಟಕ್ಕೆ**
ತರಳಬಾಳು ಬಡಾವಣೆ ಸೈಟ್(ದಕ್ಷಿಣ) 30×50, SS ಲೇಔಟ್ ಸೈಟ್ - 40×58 ಮಹಾಲಕ್ಷ್ಮಿ ಲೇಔಟ್ ಸೈಟ್( ಉತ್ತರ್ ಚಿಂದ್ - ಪಶ್ಚಿಮ) 35×61, ಡಾಲರ್ಸ್ ಕಾಲೋನಿ ಸೈಟ್ (ದಕ್ಷಿಣ) 30×40, ಶಿಕ್ಷಕರ ಬಡಾವಣೆ 2 ನೇ ಹಂತ (ದಕ್ಷಿಣ- ಆವರಗೆರೆ ) 30×40
78996 36597, 99165 25828

**ಬೇಕಾಗಿದ್ದಾರೆ**
ದೇವರಾಜ ಅರಸು ಬಡಾವಣೆ 'ಸಿ' ಬ್ಲಾಕ್‌ನಲ್ಲಿರುವ ನಂದಗೋಕುಲ ಆಂಗ್ಲ ಮಾಧ್ಯಮ ಶಾಲೆಗೆ B.Sc B.Ed (PCM, CBZ), B.Sc ಹಾಗೂ M.Sc (Maths) ತರಬೇತಿ ಹೊಂದಿದ ಶಿಕ್ಷಕ/ ಶಿಕ್ಷಕಿಯರು ಬೇಕಾಗಿದ್ದಾರೆ. ಕೂಡಲೇ ಸಂಪರ್ಕಿಸಿ
99640 17729

**WANTED TEACHERS**
B.Sc. B.Ed. (PCM)-1
B.Sc/ M.Sc-2
ACM SCHOOL
Devaraja Urs Badavane, 'C' block. Dvg.
8970321855, 8296502675

**ಬೇಕಾಗಿದ್ದಾರೆ**
ರೆಡಿಮೇಡ್ ಗಾರ್ಮೆಂಟ್ಸ್ ಶೋ ರೂಂನಲ್ಲಿ ಕೆಲಸ ಮಾಡಲು ಹುಡುಗಿಯರು ಬೇಕಾಗಿದ್ದಾರೆ. ಅನುಭವ ಇರುವ/ ಇಲ್ಲದವರಾದರೂ ಸಂಪರ್ಕಿಸಬಹುದು.
ಬುನಿಯಾದ್
ಅಶೋಕ ರೋಡ್, ದಾವಣಗೆರೆ.
96200 95520

**ಮನೆ ಬಾಡಿಗೆಗೆ ಇದೆ**
ಎಂ.ಸಿ.ಸಿ ಬಿ.ಬ್ಲಾಕ್, 2ನೇ ಮೇನ್, 6ನೇ ಕ್ರಾಸ್, #3465/1, ಮೊದಲನೇ ಮಹಡಿಯಲ್ಲಿ 1BHK ಮನೆ ಬಾಡಿಗೆಗೆ ಇದೆ. ಮುನ್ಸಿಪಲ್ ಮತ್ತು ಬೋರ್ ನೀರಿನ ಅನುಕೂಲವಿದೆ.
98440 84832
(ಸಸ್ಯಹಾರಿಗಳಿಗೆ ಮಾತ್ರ)

**ಗೃಹ ಸಾಲಗಳಿಗಾಗಿ**
ಮನೆ ಕಟ್ಟಲು, ಮನೆ ಖರೀದಿ, ಸೈಟ್ ಖರೀದಿ, ಕಟ್ಟಿರುವ ಮನೆಗೆ ಮಾರ್ಟ್‌ಗೇಜ್ ಸಾಲಗಳಿಗಾಗಿ
ಸಂಪರ್ಕಿಸಿ :
81472 61158

**WANTED**
PUC girls/ boys
Helpers Ladies 10.
Contact
78923 28599

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ SSLC, PUC Degree Pharmacy & BHMS (Government & Private College)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ಸೋಮು ಮೆಡಿಕಲ್ಸ್ ಮೇಲೆ, ಗಣೇಶ ದೇವಸ್ಥಾನದ ಹಿಂಭಾಗ, ರಾಂ ಅಂಡ್ ಕೋ ಸರ್ಕಲ್, ದಾವಣಗೆರೆ.
87490 24789, 94837 64859
87620 58369, 90080 67049

**ಪ್ರಾಮಿಸರಿ ನೋಟಿನ ಬಗ್ಗೆ**
ಪ್ರಾಮಿಸರಿ ನೋಟು ಬರೆದುಕೊಟ್ಟು ನಿಮ್ಮಿಂದ ಸಾಲ ಪಡೆದ ಬಾಬ್ತು ಹಾಗೇ ಬಾಕಿ ಉಳಿಯುತ್ತಾ ಬಂದಿರುವ ಹಣ ಬಡ್ಡಿ ಸಮೇತ ಮರಳಿ ಪಡೆಯಲು ಸಂಪರ್ಕಿಸಿರಿ
ಹೊನ್ನೂರಸ್ವಾಮಿ ವಾಂಜ್ರೆ
87926 04196

**ಕಾರ್ ಡ್ರೈವರ್ ಬೇಕಾಗಿದ್ದಾರೆ**
ಲೈಸೆನ್ಸ್ ಹೊಂದಿರುವ ಕಾರ್ ಡ್ರೈವರ್ ಬೇಕಾಗಿದ್ದಾರೆ. ದ್ವಿಚಕ್ರ ವಾಹನ ಹೊಂದಿರುವವರಿಗೆ ಆದ್ಯತೆ. ಸಂಪರ್ಕಿಸಿ
94486 56091
(ಈ ಮೇಲ್ಕಂಡ ನಂಬರ್‌ಗೆ ಈ ಹಿಂದೆ ಸಂಪರ್ಕಿಸಿದವರು ಪುನಃ ಕರೆ ಮಾಡಬೇಡಿರಿ)

**ಬೇಕಾಗಿದ್ದಾರೆ**
ರಾಣೇಬೆನ್ನೂರಿನಲ್ಲಿ ಇರುವ ಕನ್ನಡ ದಿನಪತ್ರಿಕೆಗೆ ಪೇಜ್ ಮೇಕರ್ ಬೇಕಾಗಿದ್ದಾರೆ.
ಸಂಪರ್ಕಿಸಿ
97427 89207

**ಬೇಕಾಗಿದ್ದಾರೆ**
ಬಿನ್ನಿ ಕಂಪನಿ ರಸ್ತೆಯಲ್ಲಿರುವ ಮನೆಗೆ ಮಹಿಳಾ ಮನೆಗೆಲಸದವರು ಬೇಕಾಗಿದ್ದಾರೆ.
ಸಂಪರ್ಕಿಸಿ
63631 97523

**ತೂಕದ ಲೆಕ್ಕದ ಬಟ್ಟೆ ಅಂಗಡಿ**
ಸೇಲ್... ಸೇಲ್... ಸೇಲ್...
ಮಲಬಾರ್ ಕಾಟನ್‌ನಲ್ಲಿ
Limited Offer Only
1 ಕೆ.ಜಿ ~~799~~ ಈಗ 599/-,
2 ಕೆ.ಜಿ ~~1600~~ ಈಗ 999 ಮಾತ್ರ
97420 90612

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಉಚಿತ ಭವಿಷ್ಯ ಖಚಿತ ಪರಿಹಾರ**
ನಂ. 1 ವಶೀಕರಣ ಸ್ಪೆಷಲಿಸ್ಟ್
ನೀವು ಇಷ್ಟಪಟ್ಟವರು, ನಿಮ್ಮಂತಾಗಲು, ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ಅತ್ತೆ, ಸೊಸೆ ಕಿರಿಕಿರಿ. 100% ಶೀಘ್ರದಲ್ಲೇ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ:
96068 18273

**ಅಕ್ರಮ ಖಾತೆ ಆಸ್ತಿಗಳ ಬಗ್ಗೆ**
ನಿಮ್ಮ ಗಮನಕ್ಕೆ ಬಾರದಂತೆ ನಿಮ್ಮ ಹಕ್ಕಿಗೆ ಒಳಪಟ್ಟಿರುವ ಮನೆ/ಜಮೀನು/ಸೈಟುಗಳನ್ನು ಅಕ್ರಮವಾಗಿ ಖಾತೆ ಮಾಡಿಸಿಕೊಂಡಿರುವ ಈ ಆಸ್ತಿಗಳಿಂದ ನಿಮಗೆ ಬರಬೇಕಾದ ಭಾಗಕ್ಕೆ ಸಂಪರ್ಕಿಸಿರಿ
ಹೊನ್ನೂರಸ್ವಾಮಿ ವಾಂಜ್ರೆ
87926 04196

ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)
**ವೀರಶೈವ/ಲಿಂಗಾಯತ ವಧು-ವರರ ಅನ್ವೇಷಣಾ ಕೇಂದ್ರ**
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
www.lingayathweds.com
ದಾವಣಗೆರೆ, ಶಿವಮೊಗ್ಗ, ಸಾಗರ ಬೆಂಗಳೂರು ಹಾಗೂ 10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 95135 79130, 80509 52637

**WANTED**
private tutors for home tuition with teaching experience mathematics and science, interested people can contact.
99459 88776
98862 11600

**ಭೂಮಿಕಾ ಮ್ಯಾಟ್ರಿಮೋನಿ**
ಲಿಂಗಾಯಿತ ವಧು-ವರರ ಕೇಂದ್ರ
H.O : Near coffee day, Nutana collage road, Vidyanagara 2nd main, Davanagere
77603 16576
90080 55813

**WANTED**
Fresher/ Experienced Female Staff for jockey Exclusive show Room.
DARSHAN ARCADE,
Dental College Road, Davangere.
Between 11 AM to 6 PM
PH: 08192-224842
Please Carry Photo and Biodata

**WANTED**
Residential Service Engg for Sri-I automation, Bangalore. Diploma (E&C). & ITI (Electrician).
Contact: 73537 76654
srilautomation@gmail.com

# ಮಲೇಬೆನ್ನೂರಿನ ಕೃಷಿ ಪತ್ತಿನ ಸಹಕಾರ ಸಂಘಕ್ಕೆ 5 ಲಕ್ಷ ರೂ. ಅನುದಾನ



**ಶಾಸಕ ರಾಮಪ್ಪ ಭರವಸೆ**

ಮಲೇಬೆನ್ನೂರು, ಸೆ.28- ಪಟ್ಟಣದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಕಟ್ಟಡದ ಅಭಿವೃದ್ಧಿಗೆ ಶಾಸಕರ ನಿಧಿಯಿಂದ 5 ಲಕ್ಷ ರೂ. ಅನುದಾನ ನೀಡುವುದಾಗಿ ಶಾಸಕ ಎಸ್. ರಾಮಪ್ಪ ಭರವಸೆ ನೀಡಿದ್ದಾರೆ.

ಇತ್ತೀಚೆಗೆ ಅವರು ಸಂಘದ ಕಚೇರಿಗೆ ಭೇಟಿ ನೀಡಿ, ನೂತನ ಅಧ್ಯಕ್ಷ ಪಿ.ಆರ್. ಕುಮಾರ್ ಅವರನ್ನು ಅಭಿನಂದಿಸಿದ ಸಂದರ್ಭದಲ್ಲಿ ಆಡಳಿತ ಮಂಡಳಿಯವರು ಸಂಘದ ಕಟ್ಟಡ ಕಾಮಗಾರಿ ಪೂರ್ಣಗೊಳಿಸಲು ಮತ್ತು ಕಾಂಪೌಂಡ್ ನಿರ್ಮಾಣಕ್ಕೆ ಅನುದಾನ ಕೇಳಿದಾಗ ಶಾಸಕರು ಸ್ಪಂದಿಸಿ, ಮಾತನಾಡಿದರು.

ಸಂಘದ ಮೂಲಕ ರೈತರಿಗೆ ಅಗತ್ಯ ಸಾಲ ಸೌಲಭ್ಯ ಕಲ್ಪಿಸಿ ಎಂದು ಸೂಚಿಸಿದ ಶಾಸಕರು, ಸಹಕಾರ ಇಲಾಖೆ ಯಿಂದಲೂ ಅನುದಾನ ಕೊಡಿಸುವುದಾಗಿ ಹೇಳಿದರು.

ಸಂಘದ ಅಧ್ಯಕ್ಷ ಪಿ.ಆರ್. ಕುಮಾರ್, ಸಂಘದ ನಿರ್ದೇಶಕರೂ ಆದ ಎಪಿಎಂಸಿ ಅಧ್ಯಕ್ಷ ಜಿ. ಮಂಜುನಾಥ್ ಪಟೇಲ್, ಸಂಘದ ನಿರ್ದೇಶಕರಾದ ಕೆ.ಪಿ. ಗಂಗಾಧರ್, ಯುನೂಸ್, ಡಿಸಿಸಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಜಿಗಳಿ ಆನಂದಪ್ಪ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಬಿ. ಅಬೀದ್ ಅಲಿ, ಸಮಾಜ ಸೇವಕ ನಂದಿಗಾವಿ ಶ್ರೀನಿವಾಸ್, ಸಂಘದ ಸಿಇಒ ಸಿದ್ದಪ್ಪ, ಗ್ರಾ.ಪಂ. ಮಾಜಿ ಅಧ್ಯಕ್ಷ ಭೋವಿ ಕುಮಾರ್, ರುಸ್ತುಂ ಅಲಿ, ಪಿ.ಹೆಚ್. ಶಿವಕುಮಾರ್, ಕೊಕ್ಕನೂರು ಸೋಮಶೇಖರ್, ಮೂಗಿನಗೊಂದಿ ಬಸವರಾಜಪ್ಪ, ಗಜಾನನ ಮೆಹರ್ವಾಡೆ, ಯಲವಟ್ಟಿ ಕೊಟ್ರೇಶ್ ನಾಯ್ಕ, ಬುಕ್ ಸ್ಟಾಲ್ ಶಿವು, ಪೂಜಾರ್ ಹಾಲೇಶ್ ಸೇರಿದಂತೆ ಅನೇಕರು ಹಾಜರಿದ್ದರು.

# ಎಸ್.ಪಿ.ಬಾಲಸುಬ್ರಮಣ್ಯಂ ತುಳುಕದ ಕೊಡ

## 'ಸ್ವರ ಸಾಮ್ರಾಟ ಎಸ್.ಪಿ. ಬಾಲಸುಬ್ರಮಣ್ಯಂ' ಕೃತಿ ಬಿಡುಗಡೆಯಲ್ಲಿ ಆನಂದ ಋಗ್ವೇದಿ ಬಣ್ಣನೆ



ದಾವಣಗೆರೆ, ಸೆ.28- ಸ್ವರ ಸಾಮ್ರಾಟರಾಗಿದ್ದ ಹಿರಿಯ ಗಾಯಕ ಡಾ. ಎಸ್.ಪಿ. ಬಾಲಸುಬ್ರಹ್ಮಣ್ಯಂ ಅವರು ತುಂಬಿದ ಹಾಗೂ ತುಳುಕದ ಕೊಡ ಆಗಿದ್ದರು ಎಂದು ಲೇಖಕ ಡಾ. ಆನಂದ ಋಗ್ವೇದಿ ಬಣ್ಣಿಸಿದರು.

ನಗರದ ಕುವೆಂಪು ಕನ್ನಡ ಭವನದಲ್ಲಿ 'ಜಿಲ್ಲೆ ಸಮಾಚಾರ' ಬಳಗದ ವತಿಯಿಂದ ಮೊನ್ನೆ ಹಮ್ಮಿಕೊಂಡಿದ್ದ ಪತ್ರಕರ್ತ ವಿ. ಹನುಮಂತಪ್ಪ ರಚಿಸಿರುವ 'ಸ್ವರ ಸಾಮ್ರಾಟ ಎಸ್.ಪಿ. ಬಾಲಸುಬ್ರಮಣ್ಯಂ' ಕೃತಿ ಬಿಡುಗಡೆ ಹಾಗೂ ಎಸ್ಪಿಬಿ ನೆನಪಿನ ಒಂದು ವರ್ಷ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಮಿಮಿಕ್ರಿ ಕಲೆ ಬಲ್ಲವರಾಗಿದ್ದರೂ ಚಿತ್ರ ಗೀತೆಗಳ ಗಾಯನ ಸಂದರ್ಭದಲ್ಲಿ ಮಿಮಿಕ್ರಿ ಕಲಾವಿದರನ್ನು ಬಳಸಿಕೊಳ್ಳಿ. ನನಗೆ ಹಾಡುವ ಅವಕಾಶ ಕೊಡಿ ಎಂದು ವಿನಮ್ರವಾಗಿ ಹೇಳುತ್ತಿದ್ದ ಬಾಲಸುಬ್ರಹ್ಮಣ್ಯಂ ಅವರದ್ದು ಪೂರ್ಣ ಕುಂಭದ ವ್ಯಕ್ತಿತ್ವವಾಗಿತ್ತು ಎಂದು ತಿಳಿಸಿದರು.

14 ಭಾಷೆಯಲ್ಲಿ 40 ಸಾವಿರ ಹಾಡುಗಳನ್ನು ಹಾಡಿರುವ ಬಾಲಸುಬ್ರಮಣ್ಯಂ ಅವರು ಡಬ್ಬಿಂಗ್ ಕಲಾವಿದರಾಗಿದ್ದರು. 12 ಗಂಟೆಯಲ್ಲಿ 21 ಹಾಡುಗಳನ್ನು ಹಾಡಿ ಗಿನ್ನೆಸ್ ದಾಖಲೆ ಮಾಡಿದ್ದರು. ಕರ್ನಾಟಕ ಹಿಮೊಫಿಲಿಯಾ ಸಂಸ್ಥೆಯಡಿ ಕುಸುಮ ರೋಗಿಗಳಿಗಾಗಿ ಪ್ರತಿ ಬಾರಿ ಹಾಡುತ್ತಾ ಸಂಭಾವನೆಯನ್ನು ಟ್ರಸ್ಟ್‌ಗೆ ನೀಡುತ್ತಿದ್ದ ಅವರು, ತಮ್ಮ ನಡವಳಿಕೆ ಮೂಲಕ ಎತ್ತರದ ಸ್ಥಾನಕ್ಕೆ ತಲುಪಿದ್ದರು ಎಂದು ಬಾಲಸುಬ್ರಮಣ್ಯಂ ಅವರ ವ್ಯಕ್ತಿತ್ವವನ್ನು ನೆನೆದರು.

ಕೊರೊನಾ ಬಗ್ಗೆ ಜಾಗೃತಿ ಹಾಡು ಹಾಡಿದ ಬಾಲಸುಬ್ರಮಣ್ಯಂ ಅವರು ಅದೇ ಕಾಯಿಲೆಗೆ ಬಲಿಯಾದರು. ಅವರು ಭೌತಿಕವಾಗಿ ನಮ್ಮ ಜೊತೆಗೆ ಇಲ್ಲವಾದರೂ ಹಾಡುಗಳ ರೂಪದಲ್ಲಿ ಧ್ರುವ ನಕ್ಷತ್ರವಾಗಿ ಜೀವಂತವಾಗಿದ್ದಾರೆ. ಕೋದಂಡ ಪಾಣಿ ಎಂಬ ವ್ಯಕ್ತಿ ಬಾಲಸುಬ್ರಮಣ್ಯಂ ಅವರನ್ನು ಚಿತ್ರರಂಗಕ್ಕೆ ಪರಿಚಯಿಸದೇ ಇದ್ದಿದ್ದರೆ, ಅನರ್ಘ್ಯ ರತ್ನವೊಂದು ಕಳೆದು ಹೋಗಿರುತ್ತಿತ್ತು ಎಂದ ಅವರು, ಬಾಲಸುಬ್ರಮಣ್ಯಂ ಜೀವನದ ಬಗ್ಗೆ ಗೊತ್ತಿರದ ಸಂಗತಿಗಳ ಬಗ್ಗೆ ಬೆಳಕು ಚೆಲ್ಲುವ ಈ ಕೃತಿ ಅವಿರಕ್ತವಾದ ಸಂಶೋಧನಾ ಕೃತಿ ಎಂದು ಹೇಳಿದರು.

ಚಿತ್ರ ನಿರ್ದೇಶಕ ಚಿಂದೋಡಿ ಬಂಗಾರೇಶ್ ಪುಸ್ತಕ ಬಿಡುಗಡೆಗೊಳಿಸಿ ಮಾತನಾಡುತ್ತಾ, ಬಾಲಸುಬ್ರಹ್ಮಣ್ಯಂ ಅವರೊಂದಿಗಿನ ಒಡನಾಟದ ದಿನಗಳನ್ನು ಮೆಲುಕು ಹಾಕುತ್ತಾ, ತಾವು ನಿರ್ಮಿಸಿದ ಗಾನಯೋಗಿ ಪಂಚಾಕ್ಷರ ಗವಾಯಿ ಚಿತ್ರದ ಹಾಡನ್ನು ಹಾಡಲು 8 ತಿಂಗಳು ಸಮಯ ಪಡೆದ ನಂತರ ಬಾಲಸುಬ್ರಹ್ಮಣ್ಯಂ ಅವರು ಶಾಸ್ತ್ರೀಯ ಬದ್ಧವಾದ ಹಾಡನ್ನು ಹಾಡಲು ಆಗುವುದಿಲ್ಲ ಎಂದಿದ್ದರು. ಆದರೂ ಬಿಡದೆ ಹಾಡಿಸಿದೆವು. ಆ ಹಾಡು ಅವರಿಗೆ ರಾಷ್ಟ್ರೀಯ ಪ್ರಶಸ್ತಿ ತಂದು ಕೊಟ್ಟಿತು ಎಂದು ಸ್ಮರಿಸಿದರು.

ಮೇಯರ್ ಎಸ್.ಟಿ. ವೀರೇಶ್ ಮಾತನಾಡಿ,ಸೆಲೆಬ್ರಿಟಿಯಾದರೂಜನಸಾಮಾನ್ಯರೊಂದಿಗಿನ ಒಡನಾಟದ ಬಗ್ಗೆ ಬಾಲಸುಬ್ರಹ್ಮಣ್ಯಂ ಅವರು ಜೀವಂತ ನಿದರ್ಶನ ಎಂದರು.

ವಕೀಲ ರಾಮಚಂದ್ರ ಕಲಾಲ್ ಮಾತನಾಡಿ, ಬಾಲಸುಬ್ರಹ್ಮಣ್ಯಂ ಅವರು ಪ್ರಚಾರ ಬಯಸಲಿಲ್ಲ. ಇಂತಹ ಅಪ್ರತಿಮ ಕಲಾವಿದರ ಬಗ್ಗೆ ಪುಸ್ತಕ ಪ್ರಕಟವಾಗಿರುವುದು ಗಮನಾರ್ಹ ಎಂದರು.

ಕಾರ್ಯಕ್ರಮದಲ್ಲಿ ಎಂಬಿ ಪದವಿ ಪೂರ್ವ ವಿಜ್ಞಾನ ಕಾಲೇಜಿನ ನಿರ್ದೇಶಕ ಡಾ. ಜಿ.ಎನ್. ಎಚ್. ಕುಮಾರ್, ದಾವಣಗೆರೆ ವಿವಿ ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ, ಪತ್ರಕರ್ತ ವಿ. ಹನುಮಂತಪ್ಪ, ಎನ್.ಟಿ. ಯರ್ರಿಸ್ವಾಮಿ, ಈಶ್ವರ ಶರ್ಮ ಇದ್ದರು. ಪತ್ರಕರ್ತ ರವಿ ಆರುಂಡಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಾಲಿಗ್ರಾಮ ಗಣೇಶ್ ಶೆಣೈ ನಿರೂಪಿಸಿದರು.

# ರುಪ್ಸ ಕರ್ನಾಟಕ ಅತ್ಯುತ್ತಮ ಶಿಕ್ಷಕ ಪ್ರಶಸ್ತಿಗೆ ಪ್ರಭು ಕುಮಾರ್ ಆಯ್ಕೆ



ದಾವಣಗೆರೆ, ಸೆ.28- ರುಪ್ಸ ಕರ್ನಾಟಕ ಖಾಸಗಿ ಶಾಲೆಗಳ ಸಂಘಟನೆ ಈ ವರ್ಷದಿಂದ ಖಾಸಗಿ ಶಾಲೆಗಳ ಶಿಕ್ಷಕರಿಗಾಗಿ ರಾಜ್ಯಮಟ್ಟದ ಅತ್ಯುತ್ತಮ ಶಿಕ್ಷಕ ಪ್ರಶಸ್ತಿಯನ್ನು ನೀಡುತ್ತಿದ್ದು, ಈ ಬಾರಿ ಜಿಲ್ಲೆಯಿಂದ 'ರುಪ್ಸ ಕರ್ನಾಟಕ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ'ಗೆ ನಗರದ ಈಶ್ವರಮ್ಮ ಶಾಲೆಯ ಪ್ರಾಂಶುಪಾಲ ಕೆ.ಎಸ್.ಪ್ರಭುಕುಮಾರ್ ಅವರನ್ನು ಆಯ್ಕೆ ಮಾಡಲಾಗಿದೆ.

ನಾಳೆ ದಿನಾಂಕ 29ರ ಬುಧವಾರ ಬೆಂಗಳೂರಿನಲ್ಲಿ ನಡೆಯಲಿರುವ ರಾಜ್ಯಮಟ್ಟದ ಸಮಾರಂಭದಲ್ಲಿ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಮತ್ತು ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ಮತ್ತು ಶಿಕ್ಷಕರ ಕ್ಷೇತ್ರದ ವಿಧಾನ ಪರಿಷತ್ ಸದಸ್ಯರುಗಳು ಹಾಗೂ ಸಂಘಟನೆಯ ಅಧ್ಯಕ್ಷ ಲೋಕೇಶ್ ತಾಳಿಕಟ್ಟೆಯವರ ಸಮ್ಮುಖದಲ್ಲಿ ಪ್ರಶಸ್ತಿ ನೀಡಿ ಸನ್ಮಾನಿಸಲಾಗುವುದು ಎಂದು ಜಿಲ್ಲಾ ಖಾಸಗಿ ಶಾಲೆಗಳ ಆಡಳಿತ ಮಂಡಳಿಗಳ ಒಕ್ಕೂಟದ ಕಾರ್ಯದರ್ಶಿ ಸಿ. ರಾಮಮೂರ್ತಿ ತಿಳಿಸಿದ್ದಾರೆ.

# ಅಮೃತ ಜೀವನ, ಅಮೃತ ಧಾರೆ ಯೋಜನೆಗೆ ಅರ್ಜಿ ಆಹ್ವಾನ

ದಾವಣಗೆರೆ, ಸೆ.26- ಪಶುಪಾಲನಾ ಮತ್ತು ಪಶುವೈದ್ಯಕೀಯ ಇಲಾಖೆಯು ಮುಖ್ಯಮಂತ್ರಿಗಳ ಅಮೃತ ಜೀವನ ಯೋಜನೆಯಡಿ ಮಿಶ್ರತಳಿ ಹಸು ಘಟಕ ಹಾಗೂ ಅಮೃತ ಧಾರೆ ಯೋಜನೆಯಡಿ ಹೋರಿಕರುಗಳನ್ನು ನೀಡುವ ಗುರಿ ಹೊಂದಿದ್ದು, ಆಸಕ್ತ ಫಲಾನುಭವಿಗಳು ಅಕ್ಟೋಬರ್ 2ರೊಳಗೆ ಅರ್ಜಿ ಸಲ್ಲಿಸಬಹುದು.

ಮುಖ್ಯಮಂತ್ರಿಗಳ ಅಮೃತ ಜೀವನ ಯೋಜನೆಯಡಿ ಜಿಲ್ಲೆಗೆ ಸಾಮಾನ್ಯ ವರ್ಗ-77, ಪರಿಶಿಷ್ಟ ವರ್ಗ-15 ಹಾಗೂ ಪರಿಶಿಷ್ಟ ಪಂಗಡದ 7 ಫಲಾನುಭವಿಗಳಿಗೆ ಒಂದು ಮಿಶ್ರ ತಳಿ ಹಸು ಘಟಕ ಸ್ಥಾಪಿಸಲು ಸಹಾಯ ಧನ ನೀಡುವ ಗುರಿ ನೀಡಲಾಗಿದೆ.

ತಾಲ್ಲೂಕುವಾರು ಪಶು ಆಸ್ಪತ್ರೆ ಸಹಾಯಕ ನಿರ್ದೇಶಕರ ದೂರವಾಣಿ ಸಂಖ್ಯೆ : ಡಾ.ಇಫ್ತೀಕರ್ ಅಲಿ, ಚನ್ನಗಿರಿ -9902905357, ಡಾ.ಜಗದೀಶ್. ಪಿ.ವಿ, ದಾವಣಗೆರೆ : 9448005250, ಡಾ. ನಂದ ಎಸ್.ಎಲ್, ಹರಿಹರ-8073900950, ಡಾ.ಬಾಬು ರತ್ನ, ಹೊನ್ನಾಳಿ 9448170225, ಡಾ. ಚಂದ್ರಶೇಖರ್ ಹೊಸಮನಿ, ನ್ಯಾಮತಿ 9632916450, ಡಾ.ಲಿಂಗರಾಜ್. ಕೆ.ಬಿ, ಜಗಳೂರು 99016 41942 ಇವರನ್ನು ಸಂಪರ್ಕಿಸಬಹುದು.

# ಬಿದರಗಡ್ಡೆ : ಇಂದು ವಿದ್ಯುತ್ ವ್ಯತ್ಯಯ

ಹೊನ್ನಾಳಿ ತಾಲ್ಲೂಕಿನ ಬಿದರಗಡ್ಡೆ ಸ್ವೀಕರಣಾ ಕೇಂದ್ರದಲ್ಲಿ ಇಂದು ತುರ್ತು ಕಾಮಗಾರಿ ಇರುವುದರಿಂದ ಸದರಿ ಸ್ವೀಕರಣಾ ಕೇಂದ್ರದಿಂದ ಸರಬರಾಜಾಗುವ ಕಮ್ಮಾರಗಟ್ಟೆ, ಮಾಸಡಿ, ಹರಳಹಳ್ಳಿ, ಅರಬಗಟ್ಟೆ, ಬಸವನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಬರುವ ಹಳ್ಳಿಗಳಿಗೆ ಇಂದು ಬೆಳಿಗ್ಗೆ 11ರಿಂದ ಸಂಜೆ 4 ರವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

# ಮಾಯಕೊಂಡ ಬ್ಲಾಕ್ ಕಿಸಾನ್ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಯಾಗಿ ಸಿ. ಹರೀಶ್

ದಾವಣಗೆರೆ, ಸೆ. 28- ಮಾಯಕೊಂಡ ಬ್ಲಾಕ್ ಕಿಸಾನ್ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಯಾಗಿ ಜಮ್ಮಾಪುರದ ಸಿ. ಹರೀಶ್ ಅವರನ್ನು ನೇಮಕ ಮಾಡಲಾಗಿದೆ ಎಂದು ಜಿಲ್ಲಾಧ್ಯಕ್ಷ ಬಸವರಾಜು ವಿ. ಶಿವಗಂಗಾ ತಿಳಿಸಿದ್ದಾರೆ.

# ಬೀದಿ ನಾಟಕಗಳ ಸ್ಕ್ರಿಪ್ಟ್ ರಚನೆಗೆ ಅರ್ಜಿ

ದಾವಣಗೆರೆ, ಸೆ.23- ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಪ್ರಸಕ್ತ ಸಾಲಿನ ವಿಶೇಷ ಘಟಕ, ಗಿರಿಜನ ಉಪ ಯೋಜನೆಯಡಿ ಜಿಲ್ಲಾ ಮಟ್ಟದಲ್ಲಿ ಅನುಸೂಚಿತ ಜಾತಿ ಮತ್ತು ಪಂಗಡದ ದೌರ್ಜನ್ಯ ಅಧಿನಿಯಮದಲ್ಲಿರುವ ಅಸ್ಪೃಶ್ಯತೆ ನಿವಾರಣೆ ವಿಷಯವನ್ನು ಬೀದಿ ನಾಟಕಗಳ ಮೂಲಕ ಸಾರ್ವಜನಿಕರಿಗೆ, ವಿದ್ಯಾರ್ಥಿಗಳಿಗೆ ಬೀದಿ ನಾಟಕಗಳ ಮೂಲಕ ತಿಳಿಸುವ ಉದ್ದೇಶದಿಂದ ಬೀದಿ ನಾಟಕದ ಸ್ಕ್ರಿಪ್ಟ್‌ಗಳನ್ನು ರಚಿಸಬೇಕಿದ್ದು, ಅರ್ಹ ಲೇಖಕರಿಂದ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತ ಅರ್ಹ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಲೇಖಕರು ಅರ್ಜಿ ಸಲ್ಲಿಸಬಹುದಾಗಿದ್ದು, ಅರ್ಜಿ ಸಲ್ಲಿಸಲು ಅಕ್ಟೋಬರ್ 5 ಕೊನೆಯ ದಿನವಾಗಿದೆ. ಹೆಚ್ಚಿನ ಮಾಹಿತಿಗೆ ಫೋನ್: 08192-234849 ಸಂಪರ್ಕಿಸುವುದು.

# ಟಾಂಗಾದಲ್ಲಿ ಜಿಲ್ಲಾಧಿಕಾರಿ ಕಛೇರಿಗೆ ತೆರಳುವ ಸಿದ್ದರಾಮಯ್ಯ, ಎಸ್ಸೆಸ್, ಎಸ್ಸೆಸ್ಸೆಂ, ಮಂಜಪ್ಪ



ಅಗತ್ಯ ವಸ್ತುಗಳ ಬೆಲೆ ಏರಿಕೆಯನ್ನು ಖಂಡಿಸಿ, ಜಿಲ್ಲಾ ಕಾಂಗ್ರೆಸ್ ವತಿಯಿಂದ ದಾವಣಗೆರೆಯ ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗದಲ್ಲಿ ಇಂದು ಬೆಳಿಗ್ಗೆ ವಿನೂತನ ಪ್ರತಿಭಟನೆ ನಡೆಯಲಿದೆ ಎಂದು ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ತಿಳಿಸಿದ್ದಾರೆ.

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಹಿರಿಯ ಶಾಸಕ ಡಾ.ಶಾಮನೂರು ಶಿವಶಂಕರಪ್ಪ, ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ.ಮಂಜಪ್ಪ ಅವರುಗಳು ಸಂಗೊಳ್ಳಿ ರಾಯಣ್ಣ ಪ್ರತಿಮೆಗೆ ಮಾಲಾರ್ಪಣೆ ಮಾಡುವರು. ಅಲ್ಲಿಂದ ಪ್ರತಿಭಟನೆ ನಡೆಯಲಿರುವ ಜಿಲ್ಲಾಧಿಕಾರಿ ಕಛೇರಿಯವರೆಗೆ ಟಾಂಗಾದ ಮೂಲಕ ಭಾಗವಹಿಸುವರು.

ಈ ಹಿನ್ನೆಲೆಯಲ್ಲಿ ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಅವರು ಪ್ರತಿಭಟನೆಯಲಿರುವ ಸ್ಥಳಕ್ಕೆ ಮಂಗಳವಾರ ಸಂಜೆ ಭೇಟಿ ನೀಡಿ, ಸ್ಥಳ ಪರಿಶೀಲನೆ ನಡೆಸಿದರಲ್ಲದೇ, ಪ್ರತಿಭಟನೆಗೆ ಕೈಗೊಂಡಿರುವ ಸಿದ್ದತೆ ಕುರಿತಂತೆ ಕಾರ್ಯಕರ್ತರೊಂದಿಗೆ ಚರ್ಚಿಸಿದರು.

# ಜ್ಞಾನ ಸಾಗರ ಪಿ.ಯು. ಕಾಲೇಜಿನಲ್ಲಿ ಸ್ನೇಹ ಬಂಧ

ದಾವಣಗೆರೆ, ಸೆ. 28 – ನಗರದ ಜ್ಞಾನ ಸಾಗರ ಪದವಿ ಪೂರ್ವ ಕಾಲೇಜಿನಲ್ಲಿ ಪ್ರಗ್ಯಾ ಐಐಟಿ - ಮೆಡಿಕಲ್ ಅಕಾಡೆಮಿ ಆಶ್ರಯದಲ್ಲಿ ಪ್ರಥಮ ಪಿಯು ವಿದ್ಯಾರ್ಥಿಗಳಿಗಾಗಿ ಸ್ನೇಹ ಬಂಧ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ದಾವಣಗೆರೆ ವಿ.ವಿ. ಕನ್ನಡ ಅಧ್ಯಯನ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ. ಹೆಚ್.ವಿ. ಶಾಂತರಾಜು ಕಾರ್ಯಕ್ರಮ ಉದ್ಘಾಟಿಸಿದರು. ನೆಮ್ಮದಿ ಫೌಂಡೇಷನ್ ಸ್ಥಾಪಕ ಹಾಗೂ ರಾಜ್ಯ ಪ್ರಶಸ್ತಿ ಪುರಸ್ಕೃತ ಡಾ. ಬಿ.ಹೆಚ್. ಲಕ್ಷ್ಮಣ ರೆಡ್ಡಿ ಮುಖ್ಯ ಅತಿಥಿಯಾಗಿದ್ದರು. ಕಾಲೇಜಿನ ಕಾರ್ಯದರ್ಶಿ ಬಸವರಾಜ್ ಸಾಗರ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಕಾಲೇಜಿನ ಪ್ರಾಂಶುಪಾಲ ಕೆ.ಪ್ರಸನ್ನ ಕುಮಾರ್, ಪ್ರಗ್ಯಾ ಐಐಟಿ - ಮೆಡಿಕಲ್ ಅಕಾಡೆಮಿ ಕಾರ್ಯದರ್ಶಿ ಜಿ.ಆರ್. ಸಂದೇಶ್ ಹಾಗೂ ನಿರ್ದೇಶಕರಾದ ಸುಜಯ್ ಬಿ.ಟಿ., ಹೆಚ್. ಅಂಜಿನಪ್ಪ, ಎಂ.ಆರ್. ರಮೇಶ್ ಮತ್ತಿತರರಿದ್ದರು.



# ಅಮೃತ್ ಮಹೋತ್ಸವ : ಚಿತ್ರಕಲೆ ರಚನೆಗೆ ಅವಕಾಶ


ದಾವಣಗೆರೆ ಸ್ಮಾರ್ಟ್ ಸಿಟಿ ಲಿಮಿಟೆಡ್ ವತಿಯಿಂದ ಆಜಾದಿ ಕಾ ಅಮೃತ್ ಮಹೋತ್ಸವ ಕಾರ್ಯಕ್ರಮದ ಅಂಗವಾಗಿ ಗುರುಭವನ ರಸ್ತೆಯಲ್ಲಿ ಗೋಡೆಗಳ ಮೇಲೆ ದೇಶಭಕ್ತಿ ಸಾರುವಂತಹ ಚಿತ್ರಕಲೆಗಳನ್ನು ರಚಿಸುವವರಿಗೆ ಮುಕ್ತ ಅವಕಾಶ ಕಲ್ಪಿಸಲಾಗಿದೆ.

ವಿವಿಧ ಇಲಾಖೆಗಳ ಸಹಯೋಗದೊಂದಿಗೆ ಆಜಾದಿ ಕಾ ಅಮೃತ್ ಮಹೋತ್ಸವದ ನಿಮಿತ್ತ ಇಂದಿನಿಂದ ಮೂರು ದಿನಗಳ ಕಾಲ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಕಾರ್ಯಕ್ರಮದ ಅಂಗವಾಗಿ ಗುರುಭವನ ರಸ್ತೆಯಲ್ಲಿ ದೇಶ ಭಕ್ತಿ ಸಾರುವಂತಹ ಚಿತ್ರಕಲೆಗಳನ್ನು ಗೋಡೆಗಳ ಮೇಲೆ ರಚಿಸುವವರಿಗೆ ಮುಕ್ತ ಅವಕಾಶ ಕಲ್ಪಿಸಲಾಗಿದೆ.

# ಜಿಗಳಿಯಲ್ಲಿ ಇಂದು ಸಭೆ

ಜಿಗಳಿ ಗ್ರಾ.ಪಂ. ವತಿಯಿಂದ ಇಂದು ಬೆಳಿಗ್ಗೆ 10ರಿಂದ ವಾರ್ಡ್ ಸಭೆಗಳನ್ನು ಏರ್ಪಡಿಸಿದ್ದು, ಮಧ್ಯಾಹ್ನ 3.30ಕ್ಕೆ ಗ್ರಾ.ಪಂ. ಅಧ್ಯಕ್ಷರಾದ ಶ್ರೀಮತಿ ಆಶಾ ಅಣ್ಣಪ್ಪ ಅವರ ಅಧ್ಯಕ್ಷತೆಯಲ್ಲಿ ಗ್ರಾ.ಪಂ. ಆವರಣದಲ್ಲಿ ಗ್ರಾಮಸಭೆಯನ್ನು ಕರೆಯಲಾಗಿದೆ ಎಂದು ಪಿಡಿಒ ಉಮೇಶ್ ತಿಳಿಸಿದ್ದಾರೆ. ಸಭೆಗೆ ಮಾರ್ಗದರ್ಶಿ ಅಧಿಕಾರಿಯಾಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಶ್ರೀಮತಿ ನಿರ್ಮಲ ಭಾಗವಹಿಸಲಿದ್ದಾರೆ.

# ಪಂಚಮಸಾಲಿ ಪೀಠದಲ್ಲಿ ಶ್ರೀ ಜಯಂತಿ



ಹರಿಹರದ ವೀರಶೈವ ಲಿಂಗಾಯತ ಪಂಚಮಸಾಲಿ ಜಗದ್ಗುರು ಪೀಠದಲ್ಲಿ ಶ್ರೀ ಪಂಚಮಸಾಲಿ ಜಗದ್ಗುರು ಲಿಂಗೈಕ್ಯ ಡಾ. ಮಹಾಂತ ಶಿವಾಚಾರ್ಯ ಮಹಾಸ್ವಾಮಿಗಳವರ 84ನೇ ಜಯಂತ್ಯೋತ್ಸವ ಪ್ರಯುಕ್ತ ಇಂದು ಬೆಳಿಗ್ಗೆ 5 ರಿಂದ ಲಿಂಗೈಕ್ಯ ಜಗದ್ಗುರುಗಳವರ ಕರ್ತೃ ಗದ್ದುಗೆಯಲ್ಲಿ ಮಹಾರುದ್ರಾಭಿಷೇಕ ಪೂಜಾ ವಿಧಿ ವಿಧಾನಗಳು, ಪಲ್ಲಕ್ಕಿ ಉತ್ಸವ, ಮಹಾಮಂಗಳಾರತಿ, ಮಹಾಪ್ರಸಾದ ನಡೆಯಲಿದೆ.

ಬೆಳಿಗ್ಗೆ 11ಕ್ಕೆ ಶ್ರೀ ಪಂಚಮಸಾಲಿ ಜಗದ್ಗುರು ಶ್ರೀ ವಚನಾನಂದ ಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ಧರ್ಮ ಸಭೆಯನ್ನು ಏರ್ಪಡಿಸಲಾಗಿದೆ.

# ಜೆಡಿಎಸ್ ಅಡಾಕ್ ಸಮಿತಿಗೆ ಮನ್ಸೂರ್



ದಾವಣಗೆರೆ, ಸೆ.28- ಜಿಲ್ಲಾ ಜಾತ್ಯತೀತ ಜನತಾದಳ ಪಕ್ಷದ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರಕ್ಕೆ ರಚಿಸಿರುವ ಅಡಾಕ್ ಸಮಿತಿ ಅಧ್ಯಕ್ಷರಾಗಿ ಯು.ಎಂ. ಮನ್ಸೂರ್ ಅಲಿ ನೇಮಕಗೊಂಡಿದ್ದಾರೆ.

# ಮಾಯಕೊಂಡ ಕಿಸಾನ್ ಕಾಂಗ್ರೆಸ್‌ಗೆ ಆಯ್ಕೆ



ದಾವಣಗೆರೆ, ಸೆ.28- ಮಾಯಕೊಂಡ ಬ್ಲಾಕ್ ಕಿಸಾನ್ ಕಾಂಗ್ರೆಸ್ ಉಪಾಧ್ಯಕ್ಷರಾಗಿ ಅಣಜಿ ಗ್ರಾಮದ ದಸ್ತಗೀರ್ ಸಾಬ್ ನೇಮಕಗೊಂಡಿದ್ದಾರೆ.

# ಮಗಳ ಗಂಡನ ಹತ್ಯೆ ಪ್ರಕರಣ: ತಾಯಿ, ಇಬ್ಬರು ಮಕ್ಕಳಿಗೆ ಶಿಕ್ಷೆ

ದಾವಣಗೆರೆ, ಸೆ.28- ಮಗಳನ್ನು ಪ್ರೀತಿಸಿ ಮನೆಯಿಂದ ಓಡಿ ಹೋಗಿ ಮದುವೆಯಾದ ದ್ವೇಷದ ಹಿನ್ನೆಲೆಯಲ್ಲಿ ತನ್ನಿಬ್ಬರು ಗಂಡು ಮಕ್ಕಳೊಂದಿಗೆ ಸೇರಿ ಮಗಳ ಗಂಡನನ್ನು ಹತ್ಯೆ ಮಾಡಿದ ತಾಯಿ ಮತ್ತು ಇಬ್ಬರು ಮಕ್ಕಳಿಗೆ ಇಲ್ಲಿನ 1ನೇ ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ ನ್ಯಾಯಾಲಯವು ಶಿಕ್ಷೆಯ ಜೊತೆಗೆ ದಂಡ ವಿಧಿಸಿ ತೀರ್ಪು ನೀಡಿದೆ.

ಹರಿಹರ ತಾಲ್ಲೂಕು ಕೊಂಡಜ್ಜಿ ಗ್ರಾಮದ ದುರುಗಮ್ಮ ಹಾಗೂ ಮಕ್ಕಳಾದ ತಿಮ್ಮೇಶ, ಭವಾನಿ ಶಿಕ್ಷೆಗೆ ಗುರಿಯಾದವರು.

ಕಳೆದ 2 ವರ್ಷಗಳ ಹಿಂದೆ ಅದೇ ಗ್ರಾಮದ ಹಾಲೇಶ ಎಂಬಾತ ದುರುಗಮ್ಮನ ಮಗಳಾದ ಭಾರತಿಯನ್ನು ಪ್ರೀತಿಸಿ ಮನೆಯಿಂದ ಓಡಿ ಹೋಗಿ ಮದುವೆ ಮಾಡಿಕೊಂಡಿದ್ದರು. ಆ ದ್ವೇಷದ ಹಿನ್ನೆಲೆಯಲ್ಲಿ ಜ. 23,2019ರಂದು ಹಾಲೇಶ ಮತ್ತು ಆತನ ತಾಯಿ ಆರೋಪಿತರ ಮನೆ ಮುಂದೆ ಹೋಗುತ್ತಿದ್ದಾಗ ಜಗಳ ತೆಗೆದು ಹಲ್ಲೆ ಮಾಡಿ, ತಿಮ್ಮೇಶನು ಚಾಕುವಿನಿಂದ ಹಾಲೇಶನಿಗೆ ತಿವಿದು ಕೊಲೆ ಮಾಡಿದ್ದ.

ಹರಿಹರ ಪೊಲೀಸ್ ಠಾಣೆಯ ವೃತ್ತ ನಿರೀಕ್ಷಕ ಗುರುನಾಥ ತನಿಖೆ ಮಾಡಿ ದೋಷಾರೋಪಣ ಪಟ್ಟಿ ಸಲ್ಲಿಸಿದ್ದರು. ಆರೋಪ ಸಾಬೀತಾಗಿದ್ದರಿಂದ ನ್ಯಾಯಾಲಯದ ನ್ಯಾಯಾಧೀಶರಾದ ಜೆ.ವಿ. ವಿಜಯಾನಂದ ಆರೋಪಿ ತಿಮ್ಮೇಶನಿಗೆ ಜೀವಾವಧಿ ಶಿಕ್ಷೆ ಹಾಗೂ 10 ಸಾವಿರ ದಂಡ, ದಂಡ ಪಾವತಿಸಲು ತಪ್ಪಿದಲ್ಲಿ 3 ತಿಂಗಳು ಸಜೆ ವಿಧಿಸಿದೆ. ಇತರೆ ಆರೋಪಿಗಳಾದ ದುರುಗಮ್ಮ ಹಾಗೂ ಭವಾನಿ ಇವರಿಗೆ 1 ತಿಂಗಳ ಸಜೆ ತಲಾ 250 ರೂ. ದಂಡ, ತಪ್ಪಿದಲ್ಲಿ 10 ದಿನ ಸಜೆ, 6 ತಿಂಗಳು ಸಜೆ, 500 ರೂ. ದಂಡ, ತಪ್ಪಿದಲ್ಲಿ 3 ತಿಂಗಳು ಸಜೆ, 1 ವರ್ಷ ಸಜೆ, 1 ಸಾವಿರ ದಂಡ, ತಪ್ಪಿದಲ್ಲಿ 2 ತಿಂಗಳು ಸಜೆ ವಿಧಿಸಿ ತೀರ್ಪು ನೀಡಿದ್ದಾರೆ. ಸರ್ಕಾರದ ಪರವಾಗಿ ಸರ್ಕಾರಿ ಅಭಿಯೋಜಕ ಕೆ. ಕೆಂಚಪ್ಪ ವಾದ ಮಂಡಿಸಿದ್ದರು.

# ಕ್ರಿಕೆಟ್ ಬೆಟ್ಟಿಂಗ್ : ಬಂಧನ

ದಾವಣಗೆರೆ, ಸೆ.28- ಕ್ರಿಕೆಟ್ ಬೆಟ್ಟಿಂಗ್ ಜೂಜಾಟದ ಮೇಲೆ ದಾಳಿ ನಡೆಸಿರುವ ಪೊಲೀಸರು, 58 ಸಾವಿರ ನಗದು, 2 ಮೊಬೈಲ್‌ಗಳನ್ನು ವಶಪಡಿಸಿ ಕೊಂಡಿದ್ದಾರೆ. ನಗರದ ರತ್ನಮ್ಮ ಹಾಸ್ಟೆಲ್ ಮತ್ತು ಡಯೆಟ್ ಕಾಲೇಜ್ ಮಧ್ಯ ಭಾಗದ ಸಾರ್ವಜನಿಕ ರಸ್ತೆಯಲ್ಲಿ ಕ್ರಿಕೆಟ್ ಬೆಟ್ಟಿಂಗ್ ಜೂಜಾಡುತ್ತಿದ್ದ ಓರ್ವನನ್ನು ಬಂಧಿಸಿದ್ದಾರೆ. ಕ್ರಿಕೆಟ್ ಬೆಟ್ಟಿಂಗ್ ದಂಧೆಯಲ್ಲಿ ತೊಡಗಿದ್ದ ಇತರರು ತಲೆಮರೆಸಿಕೊಂಡಿದ್ದಾರೆ. ಈ ಬಗ್ಗೆ ಬಡಾವಣೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# 1 ಪಾಸಿಟಿವ್, 6 ಗುಣ

ದಾವಣಗೆರೆ, ಸೆ.28- ಹೊರ ಜಿಲ್ಲೆಯಿಂದ ಬಂದ ಓರ್ವರಲ್ಲಿ ಸೋಂಕು ಕಾಣಿಸಿಕೊಂಡಿದ್ದು, ಜಿಲ್ಲೆಯಲ್ಲಿನ 6 ಜನರು ಗುಣ ಮುಖರಾಗಿದ್ದಾರೆ. ಸಕ್ರಿಯ ಪ್ರಕರಣಗಳ ಸಂಖ್ಯೆ 65 ಇರುವುದಾಗಿ ಜಿಲ್ಲಾಧಿಕಾರಿಗಳ ಪ್ರಕಟಣೆ ತಿಳಿಸಿದೆ.


**ದಾವಣಗೆರೆ ಜಿಲ್ಲಾ ಸಹಕಾರ ಒಕ್ಕೂಟ ನಿಯಮಿತ**

**2020-2021ನೇ ಸಾಲಿನ 18ನೇ ವಾರ್ಷಿಕ ಸಾಮಾನ್ಯ ಸಭೆಯ ತಿಳುವಳಿಕೆ ಪತ್ರ**

ದಿನಾಂಕ : 03.10.2021ರ ಭಾನುವಾರ ಮಧ್ಯಾಹ್ನ 12.00 ಘಂಟೆಗೆ ಸರಿಯಾಗಿ ದಾವಣಗೆರೆ ಜಿಲ್ಲಾ ಸಹಕಾರ ಒಕ್ಕೂಟದ 2020-21ನೇ ಸಾಲಿನ 18ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ಒಕ್ಕೂಟದ ಅಧ್ಯಕ್ಷರಾದ **ಶ್ರೀ ಎನ್.ಎ. ಮುರುಗೇಶ್‌ರವರ** ಅಧ್ಯಕ್ಷತೆಯಲ್ಲಿ 'ಕಲಾಪ್ರಕಾಶ ವೃಂದ' ದಾವಣಗೆರೆ-ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ಸಮುದಾಯ ಭವನ, ಎಂ.ಸಿ.ಸಿ. "ಎ" ಬ್ಲಾಕ್, ರಾಮಕೃಷ್ಣ ಆಶ್ರಮದ ಎದುರು, ದಾವಣಗೆರೆ ಇಲ್ಲಿ ಕರೆಯಲಾಗಿದೆ. ಮಾನ್ಯ ಸದಸ್ಯ ಸಹಕಾರ ಸಂಘಗಳು ತಮ್ಮ ಸಂಘದ/ಬ್ಯಾಂಕಿನ ಆಡಳಿತ ಮಂಡಲಿ ಸದಸ್ಯರಲ್ಲಿ ಒಬ್ಬ ಪ್ರತಿನಿಧಿಯನ್ನು ಮಾತ್ರ ಆಯ್ಕೆ ಮಾಡಿ ಸಂಘದ ಠರಾವು ಪ್ರತಿಯಲ್ಲಿ ಪ್ರತಿನಿಧಿಯ ಸಹಿಯೊಂದಿಗೆ ಸಾಮಾನ್ಯ ಸಭೆಗೆ ಸಕಾಲಕ್ಕೆ ಹಾಜರಾಗಲು ಕೋರಿದೆ.

ಮಾನ್ಯ ಸದಸ್ಯ ಸಹಕಾರ ಸಂಘಗಳಿಗೆ ಈಗಾಗಲೇ ವಾರ್ಷಿಕ ವರದಿ ಪುಸ್ತಕಗಳನ್ನು ಅಂಚೆ ಮೂಲಕ ಕಳುಹಿಸಲಾಗಿದೆ. ನೋಟಿಸ್ ತಲುಪದೇ ಇರುವವರು ಇದನ್ನೇ ವಾರ್ಷಿಕ ಸಾಮಾನ್ಯ ಸಭೆಯ ನೋಟಿಸ್ ಎಂದು ಪರಿಗಣಿಸಿ, ಹಾಜರಾಗಲು ಕೋರಿದೆ.

**ವಿಶೇಷ ಸೂಚನೆ :**

1) ಒಕ್ಕೂಟದ ಸಾಮಾನ್ಯ ಸಭೆಯಲ್ಲಿ ಅಧಿಕೃತ ಸದಸ್ಯರಿಗೆ ಮಾತ್ರ ಪ್ರವೇಶ. ಸಭೆಗೆ ಬರುವಾಗ ಈ ಸಭೆಯ ತಿಳುವಳಿಕೆ ಪತ್ರಿಕೆಯನ್ನು ಕಡ್ಡಾಯವಾಗಿ ಜೊತೆಯಲ್ಲಿ ತರಬೇಕಾಗಿ ವಿನಂತಿ.

2) ಒಕ್ಕೂಟದ ಉಪವಿಧಿಗಳ ತಿದ್ದುಪಡಿ ರೀತ್ಯಾ ಆಜೀವ ಸದಸ್ಯತ್ವ ಚಂದಾ ಹಣದ ಪರಿಷ್ಕೃತ ವ್ಯತ್ಯಾಸದ ಚಂದಾ ಹಣವನ್ನು ಪಾವತಿಸಲು ಕೋರಿದೆ.

**ಸ್ಥಳ : ದಾವಣಗೆರೆ.**
**ದಿನಾಂಕ : 27.09.2021**

**ಆಡಳಿತ ಮಂಡಲಿ ಅಪ್ಪಣೆ ಮೇರೆಗೆ**
**ಸಹಿ/- (ಕೆ.ಹೆಚ್. ಸಂತೋಷ್‌ಕುಮಾರ್)**
ಪ್ರಭಾರ ಮುಖ್ಯಕಾರ್ಯನಿರ್ವಹಣಾಧಿಕಾರಿ
ದಾವಣಗೆರೆ ಜಿಲ್ಲಾ ಸಹಕಾರ ಒಕ್ಕೂಟ ನಿ., ದಾವಣಗೆರೆ.

